# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :397(347)
ಸದಸ್ಯರ ಹೆಸರು :ಶ್ರೀ ಮಧು ಜಿ. ಮಾದೇಗೌಡ(ಪದವೀಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ :07-12-2023
ಉತ್ತರಿಸುವ ಸಚಿವರು :ಮಾನ್ಯ ಮುಖ್ಯ ಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಪ್ರಸ್ತುತ ಖಾಲಿ ಇರುವ ಗ್ರೂಪ್ 'ಎ' ಮತ್ತು 'ಬಿ' ವೃಂದದ (ಕೆ.ಎ.ಎಸ್_ ಹುದ್ದೆಗಳ ಸಂಖ್ಯೆ ಎಷ್ಟು: (ವೃಂದವಾರು ಮತ್ತು ಇಲಾಖಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಪ್ರಸ್ತುತ ಖಾಲಿ ಇರುವ ಗ್ರೂಪ್ 'ಎ' ಮತ್ತು 'ಬಿ' ವೃಂದದ(ಕೆ.ಎ.ಎಸ್) ಹುದ್ದೆಗಳ ವೃಂದವಾರು ಮತ್ತು ಇಲಾಖಾವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. |
| ಆ) | ಗ್ರೂಪ್ 'ಎ' ಮತ್ತು 'ಬಿ' ವೃಂದದ ಗೆಜೆಟೆಡ್ ಪ್ರೊಬೇಷನರಿ(ಕೆ.ಎ.ಎಸ್.) ಹುದ್ದೆಗಳ ಭರ್ತಿಗಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು: | ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು, 1997ರ ಷೆಡ್ಯೂಲ್-1ರಲ್ಲಿ ನಿರ್ದಿಷ್ಟ ಪಡಿಸಿರುವ ಗ್ರೂಪ್ – ಎ ಮತ್ತು ಗ್ರೂಪ್-ಬಿ ಹುದ್ದೆಗಳ ನೇಮಕಾತಿಗಾಗಿ ಸಂಬಂಧಪಟ್ಟ ಆಡಳಿತ ಇಲಾಖೆಗಳಿಂದ ಖಾಲಿ ಹುದ್ದೆಗಳ ಮಾಹಿತಿಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಪಡೆದಿದ್ದು, ಕರ್ನಾಟಕ ಲೋಕಸೇವಾ ಆಯೋಗಕ್ಕೆ ಹುದ್ದೆಗಳನ್ನು ಬಿಡುಗಡೆ ಮಾಡುವ ಕಾರ್ಯವು ಪ್ರಕ್ರಿಯೆಯಲ್ಲಿದೆ. |
| ಇ) | ಕೆ.ಎ.ಎಸ್. ಪರೀಕ್ಷೆಗಳು ನಿಯಮಿತವಾಗಿ ನಡೆಯದಿರುವುದಕ್ಕೆ ಕಾರಣಗಳೇನು: | ಕೋವಿಡ್-19 ಸಾಂಕ್ರಾಮಿಕ ರೋಗ ಮತ್ತು ಇತರ ಆಡಳಿತಾತ್ಮಕ ಕಾರಣಗಳಿಂದಾಗಿ ವಿಳಂಬವಾಗಿರುತ್ತದೆ. |
| ಈ) | ಕೆ.ಎ.ಎಸ್. ಪರೀಕ್ಷೆಗಳು ನಾಲ್ಕೈದು ವರ್ಷಗಳಿಂದ ನಡೆಯದಿರುವುದರಿಂದ ಪರೀಕ್ಷಾಂಕ್ಷಿಗಳಿಗೆ ವಯೋಮಿತಿ ಸಡಲಿಕೆಯ ವಿನಾಯಿತಿ ದೊರೆಕಿಸಿಕೊಡುವ ಬಗ್ಗೆ ಸರ್ಕಾರದ ನಿಲುವೇನು: (ವಿವರ ನೀಡುವುದು) | ಗೆಜೆಟೆಡ್ ಪ್ರೊಬೇಷನರ್ಸ್ ಪರೀಕ್ಷೆಗೆ ವಯೋಮಿತಿ ಸಡಿಲಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. |
| ಉ) | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಅಧೀನದಲ್ಲಿ ಗ್ರೂಪ್ 'ಎ' ಅಧಿಕಾರಿಗಳ ವಿರುದ್ಧದ ಶಿಸ್ತು ಕ್ರಮದ ಎಷ್ಟು ಪ್ರಕರಣಗಳು ಬಾಕಿ ಇದೆ: (ಪ್ರತಿಯೊಂದು ಪ್ರಕರಣದಲ್ಲಿ ಆರೋಪಿತ ಅಧಿಕಾರಿಗಳ ಹೆಸರು, ಪದನಾಮ, ಆರೋಪಗಳು ತೆಗೆದುಕೊಂಡ ಕ್ರಮ, ವಿಧಿಸಿದ ಶಿಕ್ಷೆ ಇತ್ಯಾದಿ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು. | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಅಧೀನದಲ್ಲಿ ಗ್ರೂಪ್ 'ಎ' ಅಧಿಕಾರಿಗಳ ವಿರುದ್ಧ ಒಟ್ಟು 85 ಶಿಸ್ತು ಕ್ರಮದ ಪ್ರಕರಣಗಳು ಬಾಕಿ ಇರುತ್ತದೆ. ವಿವರವನ್ನು **ಅನುಬಂಧ-2** ರಲ್ಲಿ ಲಗತ್ತಿಸಿದೆ. |

ಸಿಆಸುಇ 114 ಎಸ್‌ಎಂಎಸ್ 2023

(ಸಿದ್ದರಾಮಯ್ಯ)
ಮುಖ್ಯಮಂತ್ರಿ.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ ಮಾದೇಗೌಡ (ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 347ಕ್ಕೆ ಮಾಹಿತಿ

## ಅನುಬಂಧ-1

**(ಗ್ರೂಪ್ – ಎ ಹುದ್ದೆಗಳು)**
**(Group – A posts)**

| ಕ್ರ.ಸಂ | ಇಲಾಖೆ | ಹುದ್ದೆಗಳು | 2023-24 |
|---|---|---|---|
| 01 | ಸಿಆಸುಇ (ಸೇವೆಗಳು-2) | ಸಹಾಯಕ ಆಯುಕ್ತರು (ಕಿರಿಯ ಶ್ರೇಣಿ) | 20 |
| 02 | ವಾಣಿಜ್ಯ ತೆರಿಗೆ ಇಲಾಖೆ | ಸಹಾಯಕ ಆಯುಕ್ತರು | 41 |
| 03 | ಖಜಾನೆ ಇಲಾಖೆ | ಸಹಾಯಕ ನಿರ್ದೇಶಕರು | 2 |
| 04 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಕಾರ್ಯನಿರ್ವಾಹಕ ಅಧಿಕಾರಿ/ಸಹಾಯಕ ಕಾರ್ಯದರ್ಶಿ | 20 |
| 05 | ಒಳಾಡಳಿತ ಇಲಾಖೆ | ಡಿವೈಎಸ್‌ಪಿ | 5 |
| 06 | ಸಮಾಜ ಕಲ್ಯಾಣ ಇಲಾಖೆ | ಸಹಾಯಕ ನಿರ್ದೇಶಕರು | 10 |
| 07 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ | 7 |
| | **ಒಟ್ಟು ಹುದ್ದೆಗಳು** | | **105** |

**(ಗ್ರೂಪ್ – ಬಿ ಹುದ್ದೆಗಳು)**
**(Group – B posts)**

| ಕ್ರ.ಸಂ | ಇಲಾಖೆ | ಹುದ್ದೆಗಳು | 2023-24 |
|---|---|---|---|
| 01 | ಕಂದಾಯ ಇಲಾಖೆ | ತಹಶೀಲ್ದಾರ್ ಗ್ರೇಡ್-2 | 26 |
| 02 | ವಾಣಿಜ್ಯ ತೆರಿಗೆ ಇಲಾಖೆ | ವಾಣಿಜ್ಯ ತೆರಿಗೆ ಅಧಿಕಾರಿ | 59 |
| 03 | ಕಾರ್ಮಿಕ ಇಲಾಖೆ | ಕಾರ್ಮಿಕ ಅಧಿಕಾರಿ | 4 |
| 04 | ಒಳಾಡಳಿತ ಇಲಾಖೆ (ಕಾರಾಗೃಹ) | ಸಹಾಯಕ ಅಧೀಕ್ಷಕರು | 3 |
| 05 | ಸಹಕಾರ ಇಲಾಖೆ | ಸಹಕಾರ ಸಂಘಗಳ ಸಹಾಯಕ ನಿಬಂಧಕರು | 12 |
| 06 | ಸಹಕಾರ ಇಲಾಖೆ | ಲೆಕ್ಕಪರಿಶೋಧನೆ ಸಹಾಯಕ ನಿರ್ದೇಶಕರು | 9 |
| 07 | ಆರ್ಥಿಕ ಇಲಾಖೆ (ಅಬಕಾರಿ) | ಅಬಕಾರಿ ಉಪಅಧೀಕ್ಷಕರು | 5 |
| 08 | ಕೌಶಲ್ಯಾಭಿವೃದ್ಧಿ ಇಲಾಖೆ | ಉದ್ಯೋಗಾಧಿಕಾರಿ | 2 |
| 09 | ಯುವ ಸಬಲೀಕರಣ & ಕ್ರೀಡಾ ಇಲಾಖೆ | ಸಹಾಯಕ ನಿರ್ದೇಶಕರು | 4 |
| 10 | ನಗರಾಭಿವೃದ್ಧಿ ಇಲಾಖೆ | ಮುಖ್ಯಾಧಿಕಾರಿ ಗ್ರೇಡ್-1 | 1 |
| 11 | ಆರ್ಥಿಕ ಇಲಾಖೆ (ಖಜಾನೆ) | ಸಹಾಯಕ ಖಜಾನಾಧಿಕಾರಿ | 23 |
| 12 | ಆಹಾರ ನಾಗರೀಕ ಸರಬರಾಜು ಇಲಾಖೆ | ಸಹಾಯಕ ನಿರ್ದೇಶಕರು | 9 |
| 13 | ಪ್ರವಾಸೋದ್ಯಮ ಇಲಾಖೆ | ಸಹಾಯಕ ನಿರ್ದೇಶಕರು | 2 |
| 14 | ಸಿಆಸುಇ (ಸಿಬ್ಬಂದಿ) | ಶಾಖಾಧಿಕಾರಿ | 5 |
| 15 | ಸಮಾಜ ಕಲ್ಯಾಣ ಇಲಾಖೆ | ಸಹಾಯಕ ನಿರ್ದೇಶಕರು ಗ್ರೇಡ್-2 | 7 |
| | **ಒಟ್ಟು ಹುದ್ದೆಗಳು** | | **171** |

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ ಮಾದೇಗೌಡ (ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 347ಕ್ಕೆ ಮಾಹಿತಿ

## ಅನುಬಂಧ-2

### ಗ್ರೂಪ್ 'ಎ' ವೃಂದದ ಅಧಿಕಾರಿಗಳ ವಿರುದ್ಧದ ಶಿಸ್ತು ಕ್ರಮದ ಪ್ರಕರಣಗಳ ವಿವರಗಳು:

| ಕ್ರ ಸಂ. | ಅಧಿಕಾರಿಯ ಹೆಸರು ಶ್ರೀ / ಶ್ರೀಮತಿ | ಆರೋಪ | ತೆಗೆದುಕೊಂಡಿರುವ ಕ್ರಮ, ವಿಧಿಸಿದ ಶಿಕ್ಷೆ |
|---|---|---|---|
| 1. | ಶ್ರೀ ಇಸ್ಮಾಯಿಲ್ ಸಾಹೇಬ್.ಆರ್. ಶಿರಹಟ್ಟಿ & ಇತರರು | ವಿಶೇಷ ಭೂಸ್ವಾಧೀನಾಧಿಕಾರಿಗಳು, ತುಂಗಾ ಮೇಲ್ದಂಡೆ ಯೋಜನೆ ರಾಣೆಬೆನ್ನೂರು ಇಲ್ಲಿ ಕರ್ತವ್ಯನಿರ್ವಹಿಸುವಾಗ ರಾಣೆಬೆನ್ನೂರು ತಾಲ್ಲೂಕಿನ ಶಿರಗಂಬಿ ಸತ್ತಿಗಿಹಳ್ಳಿ, ರಟ್ಟಿಹಳ್ಳಿ, ಹಿರೇಮೊರಬ ಗ್ರಾಮಗಳ ರೈತರ ಜಮೀನುಗಳಿಗೆ ಭೂಸ್ವಾಧೀನ ಪರಿಹಾರ ಕುರಿತು ಐತೀರ್ಪು ನಿಗಧಿಪಡಿಸಿ ಪರಿಹಾರ ಪಾವತಿ ಮಾಡುವಲ್ಲಿ ಹಣವನ್ನು ದುರ್ಬಳಕೆ ಮಾಡಿಕೊಂಡಿರುವ ಆರೋಪ | ಡಿನೋವಾ ವಿಚಾರಣೆಗೆ ವಹಿಸಲಾಗಿದೆ. |
| 2. | ಶ್ರೀ ಶ್ರೀಹರ್ಷ ಶೆಟ್ಟಿ | ಗುಲಬರ್ಗಾ ಜಿಲ್ಲೆ, ಗುಲಬರ್ಗಾ ತಾಲ್ಲೂಕು, ಗುಲಬರ್ಗಾ ಹೋಬಳಿಯ ಬಡೇಪೂರ ಗ್ರಾಮದ ಸ.ನಂ:109 ರ 8.18 ಎಕರೆ ಸರ್ಕಾರಿ ಜಮೀನನ್ನು ಖಾಸಗಿ ವ್ಯಕ್ತಿಗಳ ಹೆಸರಿನಲ್ಲಿ ನೋಂದಾಯಿಸಲು ಆದೇಶ ಹೊರಡಿಸಿ, ನಂತರದಲ್ಲಿ ತಮ್ಮ ತಪ್ಪನ್ನು ತಿದ್ದಿಕೊಳ್ಳಲು ಭೂನ್ಯಾಯಮಂಡಳಿಯ ಆದೇಶ ಮತ್ತು ಹಕ್ಕು ಬದಲಾವಣೆ ದಾಖಲೆಗಳನ್ನು ನಾಶಪಡಿಸಿ ಹೊಸ ದಾಖಲೆಗಳನ್ನು ಆದೇಶ ಪ್ರತಿಗಳನ್ನು ಸೃಷ್ಟಿಸಿರುವ ಆರೋಪ. | ವಿಚಾರಣಾಧಿಕಾರಿ ಬದಲಿಸಿ ಆದೇಶಿಸಲಾಗಿದೆ. |
| 3. | ಶ್ರೀ ಹೆಚ್.ಎಸ್ ಸತೀಶ್ ಬಾಬು, | ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕು, ಪಾಳ್ಯ ಹೋಬಳಿ ಸತ್ತೇಗಾಲ ಗ್ರಾಮದ ಸರ್ವೆ ನಂ:1 ಮತ್ತು 174 ರ ಅರಣ್ಯ ಇಲಾಖೆಗೆ ಸೇರಿದೆಯೆಂದು ಹೇಳಲಾದ ಜಮೀನುಗಳನ್ನು RTC ಯಲ್ಲಿ ಸರ್ಕಾರಿ ಖರಾಬು (ಫೂಟ್ ಖರಾಬು)/ಸರ್ಕಾರ/ಖರಾಬು ಎಂದು ನಮೂದಿಸಿದ ಆರೋಪ | ಲಿಖಿತ ಹೇಳಿಕೆ ಬಗ್ಗೆ ಕಂದಾಯ ಇಲಾಖೆಯ ಅಭಿಪ್ರಾಯದನ್ವಯ ಪರಿಶೀಲಿಸಿ, ಅರಣ್ಯ ಇಲಾಖೆಯ ಸ್ಪಷ್ಟೀಕರಣ ಕೋರಲಾಗಿದೆ. |
| 4. | ಶ್ರೀ ಶ್ರೀಹರ್ಷ ಶೆಟ್ಟಿ ಮತ್ತು ಇತರರು | ಈ ಹಿಂದೆ ಕಲಬುರಗಿ ಸಹಾಯಕ ಆಯುಕ್ತರಾಗಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಕಲಬುರಗಿ ತಾಲೂಕಿನ ದದ್ದಾಪೂರ ಗ್ರಾಮದ ಸರ್ವೆ ನಂ. 55 ರ ವಿಸ್ತೀರ್ಣ 00–15 ಗುಂಟೆ ಮಸಣಮತ ಸರಕಾರಿ ಜಮೀನನ್ನು ಆದೇಶ ಸಂಖ್ಯೆ/ಕಂ/ಆರ್‌ಓಆರ್/143/2012–13 ದಿನಾಂಕ: 17.11.2012 ರನ್ವಯ ಅರ್ಜಿದಾರರಾದ ಶ್ರೀ ರಾಮಣ್ಣ ತಂದೆ ಧೂಳಪ್ಪ ಸೋಮಾ, ಮತ್ತು ಅಪ್ಪರಾವ ತಂದೆ ಶಿವಶರಣಪ್ಪ ಗಂಗಾಜಿ ಎಂಬ ಖಾಸಗಿ ವ್ಯಕ್ತಿಗಳ ಹೆಸರಿನಲ್ಲಿ ವರ್ಗಾವಣೆ ಮಾಡಲು ಆದೇಶ ಮಾಡಿದ್ದು, ಸದರಿ ಆದೇಶದಲ್ಲಿ ಸರ್ವೆ ನಂ. 55 ರ ವಿಸ್ತೀರ್ಣ 00–15 ಗುಂಟೆ ಜಮೀನು ಪಹಣಿ ಪತ್ರಿಕೆಯಲ್ಲಿ ಸರಕಾರಿ ಜಮೀನು ಮಸಣಮತ ಎಂದು ಇದ್ದರೂ ಕೂಡಾ ನಿಮ್ಮ ಆದೇಶದಲ್ಲಿ ಸರಕಾರಿ ಜಮೀನಿನ ಬಗ್ಗೆ ಎಲ್ಲಿಯೂ ಪ್ರಸ್ತಾಪ ಮಾಡದೆ ಕೇವಲ ನ್ಯಾಯಾಲಯದ ಡಿಕ್ರಿ ಆದೇಶವೆಂದು ಅನ್ಯ ವ್ಯಕ್ತಿಗಳ ಹೆಸರಿನಲ್ಲಿ ವರ್ಗಾವಣೆ ಮಾಡಲು ಆದೇಶಿಸಿರುವುದು ಕಾನೂನು ಬಾಹಿರವಾಗಿದ್ದು, ಆದೇಶ ಸಂಖ್ಯೆ/ ಕಂ/ ಆರ್‌ಓಆರ್/ 248/2012–13 ದಿನಾಂಕ: 15.02.2013 ರ ಪ್ರಕಾರ ದದ್ದಾಪೂರ ಗ್ರಾಮದ ಸರ್ವೆ ನಂ. 55 ರಲ್ಲಿ ವಿಸ್ತೀರ್ಣ 00–15 ಗುಂಟೆ ಜಮೀನಿನ ಗಣಕೀಕೃತ ಪಹಣಿ ಪತ್ರಿಕೆ ಕಲಂ 6 ರಲ್ಲಿ ನಮೂದಾಗಿರುವ ಸರಕಾರಿ ಎಂಬ ಪದವನ್ನು ತೆಗೆದು ಪಟ್ಟಾ ಜಮೀನೆಂದು ನಮೂದಿಸಲು | ಕೆ.ಎ.ಟಿ. ಯಲ್ಲಿ ವಿಚಾರಣಾಧಿಕಾರಿ ನೇಮಿಸಿರುವ ಆದೇಶವನ್ನು ವಜಾಗೊಳಿಸಲಾಗಿದ್ದು, ಪರಿಶೀಲಿಸಲಾಗುತ್ತದೆ. |

| ಕ್ರ ಸಂ. | ಅಧಿಕಾರಿಯ ಹೆಸರು ಶ್ರೀ / ಶ್ರೀಮತಿ | ಆರೋಪ | ತೆಗೆದುಕೊಂಡಿರುವ ಕ್ರಮ ವಿಧಿಸಿದ ಶಿಕ್ಷೆ |
|---|---|---|---|
| | | ಆದೇಶ ಹೊರಡಿಸಿ ಸರಕಾರಿ ಜಮೀನನ್ನು ಸಂರಕ್ಷಿಸುವ ನಿಮ್ಮ ಜವಾಬ್ದಾರಿಯನ್ನು ಮರೆತು, ಸರಕಾರದ ಸುತ್ತೋಲೆಗಳನ್ನು ಹಾಗೂ ನಿಯಮಗಳನ್ನು ಗಾಳಿಗೆ ತೂರಿ, ಸರಕಾರಿ ಜಮೀನನ್ನು ಸಂರಕ್ಷಿಸಲು ವಿಫಲರಾಗಿ, ಖಾಸಗಿ ವ್ಯಕ್ತಿಗಳೊಂದಿಗೆ ಶಾಮೀಲಾಗಿ, ಸರಕಾರಿ ಜಮೀನನ್ನು ಖಾಸಗಿ ವ್ಯಕ್ತಿಗಳ ಹೆಸರಿನಿಂದ ಪಟ್ಟಿ ಮಾಡಲು ಆದೇಶ ಹೊರಡಿಸಿರುವ ಆರೋಪ | |
| 5. | ಶ್ರೀ ನಾಗಹನುಮಯ್ಯ.ಜಿ.ಹೆಚ್ & ಇತರರು | ಈ ಹಿಂದೆ ವಿಶೇಷ ಅಪರ ಭೂಸ್ವಾಧೀನಾಧಿಕಾರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ, ಜಿಲ್ಲಾ ಪಂಚಾಯತಿಗಳ ಸಾರ್ವತ್ರಿಕ ಚುನಾವಣೆ 2016 ರಲ್ಲಿ ಜಿಲ್ಲಾ ಪಂಚಾಯತಿಗಳಿಗೆ ಚುನಾವಣಾಧಿಕಾರಿಯಾಗಿ ನೇಮಿಸಲಾಗಿ, ಹೊಸಕೋಟೆ ತಾಲ್ಲೂಕಿನ 12 – ದೊಡ್ಡಗಟ್ಟಿಗನಬ್ಬೆ ಜಿಲ್ಲಾ ಪಂಚಾಯತಿ ಕ್ಷೇತ್ರದ ಮತಗಳ ಎಣಿಕೆ ಸಮಯದಲ್ಲಿ ಕಡಿಮೆ ಮತ ಪಡೆದುಕೊಂಡಿರುವ ಅಭ್ಯರ್ಥಿಗೆ ಚುನಾವಣೆಯಲ್ಲಿ ವಿಜೇತರಾಗಿರುವರೆಂದು ಘೋಷಣೆ ಮಾಡಿ, ಪ್ರಮಾಣ ಪತ್ರ ನೀಡಿದ್ದು, ತತ್ಸಂಬಂಧದಲ್ಲಿ ರಿ–ಟ್ಯಾಬುಲೇಷನ್ ಮಾಡಿ, ಪುನಃ ಮತ ಲೆಕ್ಕ ಸರಿಪಡಿಸಿಕೊಂಡು ವಿಜೇತ ಅಭ್ಯರ್ಥಿಗೆ ಚುನಾವಣಾ ಪ್ರಮಾಣ ಪತ್ರ ನೀಡಿರುವ ಆರೋಪ | ವಿಚಾರಣಾ ವರದಿ ನಿರೀಕ್ಷಿಸಿದೆ. |
| 6. | ಶ್ರೀ ಎ ನವೀನ್ ಜೋಸೆಫ್, ಹಾಗೂ ಇತರರು | ಹಿಂದಿನ ತಹಶೀಲ್ದಾರ್ ಇವರು ನಂಜನಗೂಡು ತಾಲ್ಲೂಕು, ಚಿಕ್ಕಯ್ಯನ ಛತ್ರ ಹೋಬಳಿ, ಇಮ್ಮಾವು ಗ್ರಾಮದ ಸ.ನಂ.390–422 ಹಾಗೂ 424 ರಲ್ಲಿನ 485.39 ಎಕರೆ (90 ಯೂನಿಟ್) ಜಮೀನಿಗೆ ಸಂಬಂಧಪಟ್ಟಂತೆ ಒಟ್ಟು 54 ಎಕರೆ ಜಮೀನನ್ನು ಮಂಜೂರುದಾರರ ವಾರಸುದಾರರಿಗೆ ಅಕ್ರಮವಾಗಿ ಖಾತೆ ಮಾಡಿದ್ದರಿಂದ ಕೆಐಎಡಿಬಿಯಿಂದ ಒಟ್ಟು 79.29 ಕೋಟಿ ಹಣವನ್ನು ಅನರ್ಹ ವ್ಯಕ್ತಿಗಳಿಗೆ ಪರಿಹಾರದ ರೂಪದಲ್ಲಿ ಹಣ ಪಾವತಿಯಾಗಲು ಕಾರಣಕರ್ತರಾಗಿ, ಸರ್ಕಾರದ ಬೊಕ್ಕಸಕ್ಕೆ ಆರ್ಥಿಕ ನಷ್ಟ ಉಂಟುಮಾಡಿ ಕರ್ತವ್ಯ ಲೋಪ ಎಸಗಿರುವ ಬಗ್ಗೆ | ವಿಚಾರಣಾ ವರದಿಯ ಬಗ್ಗೆ ಕಂದಾಯ ಇಲಾಖೆಯ ಅಭಿಪ್ರಾಯ ಕೋರಲಾಗಿದೆ. |
| 7. | ಡಾ|| ಎಸ್.ಎಸ್.ಮಧುಕೇಶ್ವರ | ಈ ಹಿಂದೆ ತಹಶಿಲ್ದಾರ್, ಚಿತ್ತಾಪುರ ತಾಲ್ಲೂಕು, ಕಲಬುರಗಿ ಜಿಲ್ಲೆ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಚಿತ್ತಾಪುರ ತಾಲ್ಲೂಕು ಕೆ.ನಾಗಾಂವ ಗ್ರಾಮದ ಸರ್ವೆ ನಂ 78 ರಲ್ಲಿ ಕ್ಷೇತ್ರ 6–30 ಎಕರೆ ಹಾಗೂ ಸರ್ವೆ ನಂ 176 ರಲ್ಲಿ ಕ್ಷೇತ್ರ 8–09 ಎಕರೆ ಭೂಮಿಯನ್ನು ತಮ್ಮ ಕಚೇರಿ ಆದೇಶ ನಂ:ಆರ್.ಓ.ಆರ್/05/2009–10, ದಿನಾಂಕ:26.11.2009ರ ಮೂಲಕ ಶ್ರೀ ರಾಮರಾವ ತಂದೆ ಬಾಲಚಂದ್ರರಾವ ಕೆ.ನಾಗಾಂವ ಇವರಿಗೆ ವರ್ಗಾವಣೆ ಮಾಡಲು ಆದೇಶಿಸಿರುತ್ತಾರೆ. ಸದರಿ ಆದೇಶವನ್ನು ಮಾಡುವಾಗ, ಸಹಾಯಕ ಆಯುಕ್ತರು, ಸೇಡಂ, ರವರು ತಮ್ಮ ಪ್ರಕರಣ ಸಂಖ್ಯೆ: ಕಂ/ಆಪೀಲು/05/2007–08 ರಲ್ಲಿ, ದಿನಾಂಕ:17.07.2009ರ ಮೂಲಕ ಕೆಲವೊಂದು ಆಕ್ಷೇಪಣೆಗಳೊಂದಿಗೆ ಮರು ವಿಚಾರಣೆಗಾಗಿ ಆದೇಶ ಮಾಡಿ ಪ್ರಕರಣ ತಮಗೆ ಮರಳಿಸಿದ್ದು, ಸಹಾಯಕ ಆಯುಕ್ತರು ಮಾಡಿದ ಆಕ್ಷೇಪಣೆಗಳನ್ವಯ ಭೂ ಕಂದಾಯ ನಿಯಮಗಳು, 1966ರ ನಿಯಮ 43 ರಲ್ಲಿ ಹೇಳಿರುವಂತೆ ವಿಚಾರಣೆ ಕೈಗೆತ್ತಿಕೊಂಡು ಇತ್ಯರ್ಥಪಡಿಸದೇ ಅರ್ಜಿದಾರರಾದ ಶ್ರೀ ರಾಮರಾವ ತಂದೆ ಬಾಲಚಂದ್ರರಾವ ಇವರು ಸಲ್ಲಿಸಿದ | ಪ್ರಸ್ತುತ ಅಧಿಕಾರಿಯವರು ಮರಣ ಹೊಂದಿರುವುದರಿಂದ ವಿಚಾರಣಾಧಿಕಾರಿಯವರಿಗೆ ಸದರಿ ಮಾಹಿತಿಯನ್ನು ತಿಳಿಸಲಾಗಿದೆ. |

| ಕ್ರ ಸಂ. | ಅಧಿಕಾರಿಯ ಹೆಸರು ಶ್ರೀ / ಶ್ರೀಮತಿ | ಆರೋಪ | ತೆಗೆದುಕೊಂಡಿರುವ ಕ್ರಮ, ವಿಧಿಸಿದ ಶಿಕ್ಷೆ |
|---|---|---|---|
| | | ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ಅವಲೋಕಿಸಿ, ದಾವಾ ಆಸ್ತಿಯಲ್ಲಿ ಪ್ರತಿವಾದಿಗಳಿಗೆ ಸಾಕಷ್ಟು ಕಾಲಾವಕಾಶ ನೀಡದೇ ಪ್ರತಿವಾದಿಗಳಿಂದ ಯಾವುದೇ ಲಿಖಿತ ಹೇಳಿಕೆ ಪಡೆಯದೇ ಏಕಪಕ್ಷೀಯವಾಗಿ ಪ್ರಕರಣ ಇತ್ಯರ್ಥಪಡಿಸಿರುವುದು ಸಾಮಾಜಿಕ ನ್ಯಾಯ ತತ್ವಗಳಿಗೆ ವಿರುದ್ಧವಾಗಿದ್ದು, ಕರ್ತವ್ಯ ನಿರ್ಲಕ್ಷ್ಯತೆ ತೋರಿರುವ ಆರೋಪ | |
| 8. | ಶ್ರೀಮತಿ ಹರಿಶಿಲ್ಪ.ಜಿ. ಆರ್ ಹಾಗೂ ಇತರರು | ಅಧಿಕಾರಿಯು ಬೆಂಗಳೂರು ದಕ್ಷಿಣ ತಾಲ್ಲೂಕಿನ ತಹಶೀಲ್ದಾರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ನ್ಯಾಯಾಲಯದ ಆದೇಶವಿಲ್ಲದಿದ್ದಾಗ್ಯೂ ಆರ್.ಟಿ.ಸಿಯಲ್ಲಿ ನ್ಯಾಯಾಲಯ ಆದೇಶವೆಂದು ತಪ್ಪಾಗಿ ನಮೂದಿಸಿ ಕರ್ತವ್ಯ ಲೋಪ ವೆಸಗಿರುವುದು | ಹರಿಶಿಲ್ಪ ಮತ್ತು ಶಿವಕುಮಾರ್, ಇವರ ವಿರುದ್ಧದ ಆರೋಪಗಳ ಬಗ್ಗೆ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯನ್ನು ನೇಮಿಸಿ, ಶ್ರೀ ರಾಮು ಇವರನ್ನು ಕೈಬಿಡಲಾಗಿದೆ. ಶ್ಯಾಮಲ ಇವರಿಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಯಿಂದ ಮಾಹಿತಿ/ವರದಿ ಕೋರಲಾಗಿದೆ.<br>ಮಾನ್ಯ ಕೆ.ಎ.ಟಿಯಲ್ಲಿ ದಾಖಲಿಸಲಾದ ಅರ್ಜಿ ಸಂಖ್ಯೆ:1581/2020 ಮತ್ತು 1583/2020 ರಲ್ಲಿ ಸದರಿಯವರುಗಳ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ವಜಾಗೊಳಿಸಲಾಗಿದ್ದು, ಕಾನೂನು ಇಲಾಖೆಯ ಮೇಲ್ಮನವಿ ಸಲ್ಲಿಸಲು ಅರ್ಹ ಪ್ರಕರಣವಲ್ಲವೆಂದು ಅಭಿಪ್ರಾಯಿಸಿರುವ ಹಿನ್ನಲೆಯಲ್ಲಿ ಅಂತಿಮ ನಿರ್ಣಯ ಕೈಗೊಳ್ಳಲು ಪರಿಶೀಲನೆಯಲ್ಲಿದೆ. |
| 9. | ಡಾ॥ ಜಿ.ಸುರೇಶ್, | ಅಧಿಕಾರಿಯು ವಿಧಾನ ಸಭಾ ಚುನಾವಣೆ–2018ರಲ್ಲಿ ಮಂಡ್ಯ ವಿಧಾನ ಸಭಾ ಚುನಾವಣಾಧಿಕಾರಿ ಹುದ್ದೆಗೆ ನಿಯೋಜಿಸಿದ್ದರೂ, ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ಕರ್ತವ್ಯ ಲೋಪವೆಸಗಿರುವ ಬಗ್ಗೆ. | ವಿಚಾರಣಾ ವರದಿ ನಿರೀಕ್ಷಿಸಿದೆ |
| 10. | ಡಾ॥ ಜಿ.ಸುರೇಶ್, ಕೆ.ಎ.ಎಸ್(ಕಿ.ಶ್ರೇ) | ಈ ಹಿಂದೆ ಅಧಿಕಾರಿಯವರ ವಿರುದ್ಧ ಅಮಾನತ್ತು ಆದೇಶವನ್ನು ತೆರವುಗೊಳಿಸಿ ಸೇವೆಗೆ ಪುನರ್ ಸ್ಥಾಪಿಸಿದ್ದರೂ ಸಹ ಸದರಿ ಹುದ್ದೆಗೆ ಸುಮಾರು 01 ವರ್ಷ 04 ತಿಂಗಳ ಅವಧಿ ಕಳೆದರೂ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ಕರ್ತವ್ಯಲೋಪ ಎಸಗಿರುವ ಆರೋಪ | 2ನೇ ಕಾರಣ ಕೇಳುವ ನೋಟೀಸಿಗೆ ಸಲ್ಲಿಸಿರುವ ಲಿಖಿತ ಹೇಳಿಕೆ ಪರಿಶೀಲಿಸಿ ವೈದ್ಯಕೀಯ ಮಂಡಳಿಯ ಪರಿಶೀಲನೆಗೆ ಸಲ್ಲಿಸಲಾಗಿದೆ |
| 11. | 1. ಶ್ರೀ ಎಲ್.ಸಿ.ನಾಗರಾಜು, ಕೆ.ಎ.ಎಸ್(ಕಿ.ಶ್ರೇ) (ರಾಜೀನಾಮೆ)<br>2. ಮಂಜುನಾಥ್, ಗ್ರಾಮಲೆಕ್ಕಿಗ | ಐಎಂಎ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರಮವಾಗಿ ರೂ.4.5 ಕೋಟಿ ಹಾಗೂ ರೂ.10.00 ಲಕ್ಷಗಳ ಲಂಚದ ಹಣ ಪಡೆದಿರುವುದು, ಸಿಆರ್‌ಪಿಸಿ ಕಲಂ 197 ಮತ್ತು ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 19(1) ರಡಿಉ ಎಸಗಿರುವ ಶಿಕ್ಷಾರ್ಹ ಅಪರಾಧಗಳ ಬಗ್ಗೆ ಇಲಾಖಾ ವಿಚಾರಣೆ ಪ್ರಾರಂಭಿಸಲಾಗಿದೆ | ಪ್ರಕರಣದಲ್ಲಿ ವಿಚಾರಣಾಧಿಕಾರಿಯನ್ನು ನೇಮಿಸಿ ದಿನಾಂಕ:07.09.2023 ರಂದು ಆದೇಶಿಸಲಾಗಿದೆ. |

| ಕ್ರ ಸಂ. | ಅಧಿಕಾರಿಯ ಹೆಸರು ಶ್ರೀ / ಶ್ರೀಮತಿ | ಆರೋಪ | ತೆಗೆದುಕೊಂಡಿರುವ ಕ್ರಮ/ ವಿಧಿಸಿದ ಶಿಕ್ಷೆ |
|---|---|---|---|
| 12. | ಡಾ॥ ಎಸ್.ಎಸ್. ಮಧುಕೇಶ್ವರ, ಕೆ.ಎ.ಎಸ್. (ಕಿ.ಶ್ರೇ) | ವರ್ಗಾವಣೆ ಆದೇಶವಾಗಿ ಪ್ರಭಾರ ಹಸ್ತಾಂತರಿಸಿದ ನಂತರವೂ ಹಿಂದಿನ ಹುದ್ದೆಯಲ್ಲಿನ ಕಂದಾಯ ಮೇಲ್ಮನವಿ ಪ್ರಕರಣ ಮತ್ತು ಇತರೆ ಕೆಲ ಕಡತಗಳಿಗೆ ಸಹಿ ಮಾಡಿರುವ ಆರೋಪ. | ಅಧಿಕಾರಿಯವರು ಮರಣ ಹೊಂದಿರುವುದರಿಂದ ಸದರಿ ಮಾಹಿತಿಯನ್ನು ವಿಚಾರಣಾಧಿಕಾರಿಯವರಿಗೆ ತಿಳಿಸಲಾಗಿದೆ. |
| 13. | ಡಾ॥ ಜಿ.ಆರ್.ಹರೀಶ್. ಕೆ.ಎ.ಎಸ್. (ಕಿ.ಶ್ರೇ) | ಜಿಲ್ಲಾ ನ್ಯಾಯಾಲಯ ಆದೇಶವನ್ನು ತಿರಸ್ಕರಿಸಿ ತಪ್ಪು ವರದಿ ನೀಡಿ ಪೋಡಿ ಮತ್ತು ಖಾತೆ ವರ್ಗಾವಣೆ ಮಾಡಿರುವ ಬಗ್ಗೆ. | ಲಿಖಿತ ಹೇಳಿಕೆ ಪರಿಶೀಲನೆಯಲ್ಲಿದೆ. |
| 14. | ಶ್ರೀ ಹೆಚ್.ವಿ.ಗಿರೀಶ್, ಕೆ.ಎ.ಎಸ್(ಕಿ.ಶ್ರೇ) ಮತ್ತು ಇತರರು | ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ಪಾಲನೆ ಮಾಡದಿರುವ ಆರೋಪ | ಲಿಖಿತ ಹೇಳಿಕೆಯ ಬಗ್ಗೆ ಕಂದಾಯ ಇಲಾಖೆಯ ಅಭಿಪ್ರಾಯ ಕೋರಲಾಗಿದೆ. |
| 15. | ಗಿರೀಶ್ ನಂದನ್ ಎಂ | LCO ಅಲ್ಲದಿದ್ದರೂ ಪ್ರಮಾಣಪತ್ರ ಸಲ್ಲಿಸಿ, ಸರ್ಕಾರಿ ಜಮೀನಿಗೆ ಪರಿಹಾರ ಪಾವತಿಸಲು ಕಾರಣರಾಗಿರುವ ಆರೋಪ | ವಿಚಾರಣಾ ವರದಿ ನಿರೀಕ್ಷಿಸಿದೆ. |
| 16. | ಶ್ರೀ ಹೆಚ್.ವಿ.ಗಿರೀಶ್, ಕೆ.ಎ.ಎಸ್(ಕಿ.ಶ್ರೇ) ಮತ್ತು ಇತರರು | ಅಧಿಕಾರಿಯವರು ಈ ಹಿಂದೆ ತಹಶೀಲ್ದಾರ್, ಮಾಲೂರು ತಾಲ್ಲೂಕು ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಮಾಲೂರು ತಾಲ್ಲೂಕು ಕಸಬಾ ಹೋಬಳಿ, ದೊಂಬ್ರಹಳ್ಳಿ ಗ್ರಾಮದ ಸ.ನಂ 173 ರಲ್ಲಿನ 6-19 ಎ-ಗು ಅಕಾರ ಕಂಡ ಸರ್ಕಾರಿ ಜಮೀನನ್ನು ಸೃಷ್ಠಿತ ಅಕ್ರಮ ದಾಖಲೆಗಳ ಆಧಾರದಲ್ಲಿ ಮೂರನೇ ವ್ಯಕ್ತಿಗೆ ಹಕ್ಕು ಸ್ವಾಮ್ಯತೆ ಮಾಡಲು ಕಾರಣರಾಗಿರುವ ಆರೋಪ. | ವಿಚಾರಣಾಧಿಕಾರಿಯನ್ನು ನೇಮಿಸಿ ಆದೇಶಿಸಲಾಗಿದೆ. |
| 17. | ಶ್ರೀ ಶ್ರೀಹರ್ಷ ಎಸ್ ಶೆಟ್ಟಿ, ಕೆ.ಎ.ಎಸ್(ಕಿ.ಶ್ರೇ) | ಕಲಬುರಗಿ ಜಿಲ್ಲೆಯ ವಕ್ಕಲಗೇರಾ ಹಳ್ಳಿಯಲ್ಲಿ ಖಾಸಗಿ(ಪಟ್ಟಾ) ಜಮೀನುಗಳಾದ ಸರ್ವೆ ನಂ 37/ಎ1/1 ಮತ್ತು 37/2 ರಲ್ಲಿನ ನಿಯಮಿತವಾಗಿ ನಿರ್ಮಿಸಲ್ಪಟ್ಟ ಮನೆಗಳನ್ನು ಕೆಡವಲು ಅಕ್ರಮವಾಗಿ ಹಾಗೂ ಕಾನೂನುಬಾಹಿರವಾಗಿ ಆದೇಶಗಳನ್ನು ಹೊರಡಿಸಿ, ಸಾರ್ವಜನಿಕರಿಗೆ ಅನವಶ್ಯಕ ತೊಂದರೆ ಉಂಟುಮಾಡಿರುವುದು | ಪ್ರಕರಣದಲ್ಲಿ ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯನ್ನು ನೇಮಿಸಲಾಗಿದೆ. |
| 18. | ಡಾ॥ ಎಸ್.ಎಸ್.ಮಧುಕೇಶ್ವರ | ಉಪವಿಭಾಗಾಧಿಕಾರಿ, ಕುಂದಾಪುರ ಉಪವಿಭಾಗ ಹುದ್ದೆಯಲ್ಲಿ ಎಸಗಿರುವ ಕರ್ತವ್ಯಲೋಪಗಳ ಬಗ್ಗೆ | ಅಧಿಕಾರಿಯವರು ಮರಣ ಹೊಂದಿರುವುದರಿಂದ ಸದರಿ ಮಾಹಿತಿಯನ್ನು ವಿಚಾರಣಾಧಿಕಾರಿಯವರಿಗೆ ತಿಳಿಸಲಾಗಿದೆ. |
| 19. | ಇಸ್ಮಾಯಿಲ್ ಸಾಹೇಬ್ ಶಿರಹಟ್ಟಿ | ಸುಳ್ಳು ವಾಸಸ್ಥಳ ಪ್ರಮಾಣ ಪತ್ರ ನೀಡಿರುವ ಆರೋಪ | ಲಿಖಿತ ಹೇಳಿಕೆ ಬಗ್ಗೆ ಕಂದಾಯ ಇಲಾಖೆ ಅಭಿಪ್ರಾಯ ಕೋರಲಾಗಿದೆ. |
| 20. | ಡಾ॥ ಮಂಜುನಾಥ್.ವಿ | ಚುನಾವಣಾ ಕರ್ತವ್ಯಕ್ಕೆ ಗೈರುಹಾಜರಾದ ಆರೋಪ | ಪ್ರಕರಣದಲ್ಲಿ ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯನ್ನು ನೇಮಿಸಿ ಆದೇಶಿಸಲಾಗಿರುತ್ತದೆ. |
| 21. | ಟಿ.ಜಿ.ಗುರುಪ್ರಸಾದ್, ಕೆ.ಎ.ಎಸ್(ಕಿ.ಶ್ರೇ) | ಅರಣ್ಯ ಮತ್ತು ಡೀಮ್ಡ್ ಅರಣ್ಯ ಪ್ರದೇಶಗಳನ್ನು ಭೂಮಂಜೂರಾತಿ ಮಾಡದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನವಿದ್ದರೂ, ಭೂ ಮಂಜೂರಾತಿ ಆದೇಶ ನೀಡಿ, ಫಲಾನುಭವಿಗಳಿಗೆ ಭೂಮೌಲ್ಯ ಮತ್ತು ಶುಲ್ಕ ಮರುಪಾವತಿ ಮಂಜೂರಾತಿ ಆದೇಶ ರದ್ದುಪಡಿಸುವ ಕಾನೂನಾತ್ಮಕ ಸಮಸ್ಯೆ ಉದ್ಭವಿಸಲು ಕಾರಣರಾಗಿರುವ ಆರೋಪ | ಲಿಖಿತ ಹೇಳಿಕೆಯ ಬಗ್ಗೆ ಕಂದಾಯ ಇಲಾಖೆಯ ಅಭಿಪ್ರಾಯ ಕೋರಲಾಗಿದೆ. |

| ಕ್ರ ಸಂ. | ಅಧಿಕಾರಿಯ ಹೆಸರು ಶ್ರೀ / ಶ್ರೀಮತಿ | ಆರೋಪ | ತೆಗೆದುಕೊಂಡಿರುವ ಕ್ರಮ, ವಿಧಿಸಿದ ಶಿಕ್ಷೆ |
|---|---|---|---|
| 22. | ಡಾ|| ಎಂ.ಜಿ.ಶಿವಣ್ಣ ಮತ್ತು ಇತರರ ವಿರುದ್ಧ | ಸರ್ಕಾರದ ಜಮೀನನ್ನು ಖಾಸಗಿಯವರ ಹೆಸರಿಗೆ ಖಾತೆ ಮಾಡಿರುವ ಆರೋಪ. | ಲಿಖಿತ ಹೇಳಿಕೆ ನಿರೀಕ್ಷಿಸಲಾಗಿದೆ. |
| 23. | ಶ್ರೀ ದಯಾನಂದ ಪಾಟೀಲ್ | ಸರ್ಕಾರದ ಅನುಮತಿ ಪಡೆಯದೆ ಭೂ ಪರಿಹಾರ ವಿತರಿಸಿರುವ ಬಗ್ಗೆ. | ಲಿಖಿತ ಹೇಳಿಕೆ ಸ್ವೀಕೃತವಾಗಿದ್ದು ಪರಿಶೀಲನೆಯಲ್ಲಿದೆ. |
| 24. | ಶ್ರೀ ಎ.ಹೆಚ್.ಧವಳಗಿ | ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿರುವ ಆರೋಪ. | ಲಿಖಿತ ಹೇಳಿಕೆ ನಿರೀಕ್ಷಿಸಲಾಗಿದೆ. |
| 25. | ಶ್ರೀ ಮಲ್ಲೇಶ್.ಎಂ ತಂಗಾ | ಸರ್ಕಾರದ ಜಮೀನನ್ನು ಖಾಸಗಿಯವರ ಹೆಸರಿಗೆ ಖಾತೆ ಮಾಡಿರುವ ಆರೋಪ. | ಲಿಖಿತ ಹೇಳಿಕೆ ನಿರೀಕ್ಷಿಸಲಾಗಿದೆ. |
| 26. | ಶ್ರೀ ಉಮೇಶ್.ಜೆ.. ಹಾಗೂ ಇತರರು | ಸರ್ಕಾರದ ಜಮೀನನ್ನು ಖಾಸಗಿಯವರ ಹೆಸರಿಗೆ ಖಾತೆ ಮಾಡಿರುವ ಆರೋಪ. | ಲಿಖಿತ ಹೇಳಿಕೆ ಸ್ವೀಕೃತವಾಗಿದ್ದು ಪರಿಶೀಲನೆಯಲ್ಲಿದೆ. |
| 27. | ಶ್ರೀ ಶಿವಾನಂದ ಪಿ.ಸಾಗರ | ಪಿ.ಟಿ.ಸಿ.ಎಲ್ ಕಾಯ್ದೆಯನ್ನು ಉಲ್ಲಂಘನೆ ಮಾಡಿರುವ ಆರೋಪ. | ಲಿಖಿತ ಹೇಳಿಕೆ ಬಗ್ಗೆ ಕಂದಾಯ ಇಲಾಖೆಯ ಅಭಿಪ್ರಾಯ ನಿರೀಕ್ಷಿಸಿದೆ. |
| 28. | ಶ್ರೀ ಟಿ.ಸಿ.ಹಾದಿಮನಿ | ಐ–ತೀರ್ಪು ರಚಿಸುವಲ್ಲಿ ವಿಳಂಬವಾಗಿರುವ ಆರೋಪ. | ಲಿಖಿತ ಹೇಳಿಕೆ ಬಗ್ಗೆ ಜಲಸಂಪನ್ಮೂಲ ಇಲಾಖೆಯ ಅಭಿಪ್ರಾಯ ನಿರೀಕ್ಷಿಸಿದೆ. |
| 29. | ಶ್ರೀ ಬಾಳಪ್ಪ ಹಂದಿಗುಂದ, ಕೆ.ಎ.ಎಸ್(ಕಿ.ಶ್ರೇ) ಮತ್ತು ಶ್ರೀ ಬಿ.ಆರ್. ಮಂಜುನಾಥ್, | ಅಧಿಕಾರಿಯವರುಗಳ ಬೇಜವಾಬ್ದಾರಿ ನ್ಯಾಯಾಂಗ ನಿಂದನಾ ಪ್ರಕರಣವನ್ನು ದಾಖಲಿಸಿ, ಸರ್ಕಾರಕ್ಕೆ ಮುಜುಗರ ಉಂಟು ಮಾಡಿರುವ ಆರೋಪ. | ಲಿಖಿತ ಹೇಳಿಕೆ ನಿರೀಕ್ಷಿಸಿದೆ. |
| 30. | ಶ್ರೀ ಡಾ|| ಎನ್.ಸಿ.ವೆಂಕಟರಾಜು, ಕೆ.ಎ.ಎಸ್. (ಕಿ.ಶ್ರೇ) | ಮೂಲೆ ನಿವೇಶನ ಹಂಚಿಕೆಯಲ್ಲಿ ಎಸಗಿರುವ ಅಕ್ರಮ. | ಲಿಖಿತ ಹೇಳಿಕೆಯ ಬಗ್ಗೆ ನಗರಾಭಿವೃದ್ಧಿ ಇಲಾಖೆಯ ಅಭಿಪ್ರಾಯ ಕೋರಲಾಗಿದೆ. |
| 31. | ಎಂ.ಜಿ.ಶಿವಣ್ಣ, ಕೆ.ಎ.ಎಸ್. (ಕಿ.ಶ್ರೇ) | ಹಿಂದಿನ ಉಪವಿಭಾಗಾಧಿಕಾರಿ, ಬೆಂಗಳೂರು ಉತ್ತರ ಉಪವಿಭಾಗ ಇವರು ದಿನಾಂಕ:02.02.2023 ರಂದು ಸದರಿ ಹುದ್ದೆಯಿಂದ ವರ್ಗಾವಣೆಗೊಂಡ ನಂತರ ಭೂಮಿ ತಂತ್ರಾಂಶದಲ್ಲಿ ಅನುಮೋದನೆ ನೀಡಿರುವುದಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:6061/2023ರಲ್ಲಿಅಧಿಕಾರಿಯವರ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ನೀಡಿದ ನಿರ್ದೇಶನದಂತೆ ಕೈಗೊಂಡಿರುವ ಶಿಸ್ತು ಕ್ರಮ. | ದೋಷಾರೋಪಣಾ ಪಟ್ಟಿಯನ್ನು ಜಾರಿಗೊಳಿಸಲಾಗಿ, ಲಿಖಿತ ಹೇಳಿಕೆ ನಿರೀಕ್ಷಿಸಲಾಗಿದೆ. |
| 32. | ಶ್ರೀ ಹೆಚ್.ಎಸ್.ಅರುಣ ಪ್ರಭ, ಕೆ.ಎ.ಎಸ್(ಕಿ.ಶ್ರೇ) | ಈ ಹಿಂದೆ ಚನ್ನಪಟ್ಟಣ ತಾಲ್ಲೂಕು ತಹಶೀಲ್ದಾರ್‌ರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ರಾಮನಗರ ಜಿಲ್ಲೆ ಚೆನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಚೋಳಮಾರನಹಳ್ಳಿ ಗ್ರಾಮದ ಸ.ನಂ.90 ರಲ್ಲಿ 20–00 ಎಕರೆ ಸರ್ಕಾರಿ ಗೋಮಾಳ ಜಮೀನಿನ ಪೈಕಿ 9.00 ಎಕರೆ ಜಮೀನಿಗೆ ದರಖಾಸ್ತು ಪೋಡಿ ಪ್ರಕರಣಗಳ ಅಳತೆ ಮತ್ತು ದುರಸ್ತಿ ಕೆಲಸಗಳನ್ನು ಕೈಗೊಳ್ಳಲು ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 283 ಭೂದಾಸ 2010, ದಿನಾಂಕ:23.11.2010 ರ ಸುತ್ತೋಲೆಗೆ ವ್ಯತಿರಿಕ್ತವಾಗಿ ಶ್ರೀ ಸತ್ಯನ್ ಬಿನ್ ಸಂಪತ್‌ರವರೊಂದಿಗೆ ಶಾಮೀಲಾಗಿ ಅವರ ಹೆಸರಿಗೆ 9–00 ಎಕರೆ ಜಮೀನನ್ನು ಪೋಡಿ ದುರಸ್ತಿಪಡಿಸಲು ಕಾರಣರಾಗಿರುವ ಆರೋಪ | ಲಿಖಿತ ಹೇಳಿಕೆ ಬಗ್ಗೆ ಕಂದಾಯ ಇಲಾಖೆಯ ಅಭಿಪ್ರಾಯ ನಿರೀಕ್ಷಿಸಿದೆ. |
| 33. | ಹೆಚ್.ಎಸ್.ಅರುಣ ಪ್ರಭ | ನ್ಯಾಯಬೆಲೆ ಅಂಗಡಿಯಲ್ಲಿ ನಡೆಯುತ್ತಿದ್ದ ಅಕ್ರಮವನ್ನು ಸಕಾಲದಲ್ಲಿ ತಡೆಗಟ್ಟದಿರುವ ಆರೋಪ | ಲಿಖಿತ ಹೇಳಿಕೆ ಪರಿಶೀಲನೆಯಲ್ಲಿದೆ. |
| 34. | ಶ್ರೀಮತಿ ಜಿ.ಆರ್.ಹರಿಶಿಲ್ಪ, | ಮಾಹಿತಿ ಆಯೋಗದ ಆದೇಶದನ್ವಯ | ಕೆ.ಎ.ಟಿ. ಆದೇಶದನ್ವಯ |

| ಕ್ರ ಸಂ. | ಅಧಿಕಾರಿಯ ಹೆಸರು ಶ್ರೀ / ಶ್ರೀಮತಿ | ಆರೋಪ | ತೆಗೆದುಕೊಂಡಿರುವ ಕ್ರಮ/ ವಿಧಿಸಿದ ಶಿಕ್ಷೆ |
|---|---|---|---|
| | | | ವಿಚಾರಣಾಧಿಕಾರಿಯನ್ನು ನೇಮಿಸಲಾಗಿರುತ್ತದೆ. |
| 35. | ಶ್ರೀ ಭೀಮಾ ನಾಯ್ಕ್ | ಮಾಹಿತಿ ಆಯೋಗದ ನಿರ್ದೇಶನದನ್ವಯ | ಲಿಖಿತ ಹೇಳಿಕೆ ಪರಿಶೀಲನೆಯಲ್ಲಿದೆ. |
| 36. | ಶ್ರೀ ಎ.ಮರೀಗೌಡ. ಹಾಗೂ ಇತರರು | ಮೈಸೂರು ಜಿಲ್ಲೆ ಕೆ.ಆರ್ ನಗರ ತಾಲ್ಲೂಕು, ಮಿರ್ಲೆ ಗ್ರಾಮದ ಜೀತ ವಿಮುಕ್ತರ ಪುನರ್ ವಸತಿ ಯೋಜನೆಯಡಿಯಲ್ಲಿ ರಾಸುಗಳು ಹಾಗೂ ದನದ ಆಹಾರಗಳನ್ನು ಖರೀದಿಸುವಲ್ಲಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸರ್ಕಾರಕ್ಕೆ ಮೋಸ/ನಷ್ಟ ಉಂಟು ಮಾಡಿದ ಆರೋಪ | ವಿಚಾರಣಾ ವರದಿಯ ಬಗ್ಗೆ ಕಂದಾಯ ಇಲಾಖೆಯ ಅಭಿಪ್ರಾಯ ಕೋರಲಾಗಿದೆ. |
| 37. | ಶ್ರೀ ಎ. ಮರೀಗೌಡ. | ಈ ಹಿಂದೆ ಉಪ ನಿರ್ದೇಶಕರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ರಾಮನಗರ ಜಿಲ್ಲೆ – ಈ ಹುದ್ದೆಯಲ್ಲಿ ಫೆಬ್ರವರಿ–2009 ರಿಂದ ಜೂನ್–2009ರ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಎಸಗಿದ ಕರ್ತವ್ಯಲೋಪ ಹಾಗೂ ದುರ್ನಡತೆ ಆರೋಪ. | ಪ್ರಕರಣದಲ್ಲಿನ ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯನ್ನು ನೇಮಿಸಿದ್ದು, ವಿಚಾರಣಾ ವರದಿ ನಿರೀಕ್ಷಿಸಿದೆ. |
| 38. | ಶ್ರೀ ಜಿ.ಎನ್. ಬಸವರಾಜ. | ಈ ಹಿಂದೆ ವಿಶೇಷ ಭೂಸ್ವಾಧೀನಾಧಿಕಾರಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹೊನ್ನಾವರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಎಸಗಿದ್ದಾರೆನ್ನಲಾದ 10 ಆರೋಪಗಳ ಬಗ್ಗೆ | 2ನೇ ಕಾರಣ ಕೇಳುವ ನೋಟೀಸ್ ಗೆ ಸಲ್ಲಿಸಿರುವ ಲಿಖಿತ ಹೇಳಿಕೆಯ ಬಗ್ಗೆ ಅಭಿಪ್ರಾಯವನ್ನು ಸಲ್ಲಿಸುವಂತೆ ಕಂದಾಯ ಇಲಾಖೆಯನ್ನು ಕೋರಲಾಗಿದೆ. |
| 39. | ಶ್ರೀ ಆರ್.ವೆಂಕಟೇಶ್, ನಿವೃತ್ತ ಕೆ.ಎ.ಎಸ್(ಕಿ.ಶ್ರೇ) | ಅಧಿಕಾರಿಯ ವಿರುದ್ಧ ವಿಧಿಸಲಾಗಿದ್ದ ದಂಡನಾದೇಶವನ್ನು ರದ್ದುಪಡಿಸಿ ಮರುವಿಚಾರಣೆ ನಡೆಸುವಂತೆ ಆದೇಶವಾದ ಹಿನ್ನಲೆಯಲ್ಲಿ ಮರುವಿಚಾರಣೆ ನಡೆಸಲಾಗುತ್ತಿದೆ. | ಮಾನ್ಯ ಕೆ.ಎ.ಟಿ ಆದೇಶದ ಹಿನ್ನಲೆಯಲ್ಲಿ ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಯನ್ನು ನೇಮಿಸಲಾಗಿದೆ. ಸದರಿ ಕ್ರಮವನ್ನು ಅಧಿಕಾರಿಯವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿ, ತಡೆಯಾಜ್ಞೆ ಪಡೆದಿರುತ್ತಾರೆ. |
| 40. | ಶ್ರೀ ಪಿ.ಎಸ್ ಮಂಜುನಾಥ ಮತ್ತು ಶ್ರೀ ಐ.ಆರ್.ಶಿರಹಟ್ಟಿ, | ಈ ಹಿಂದೆ ಉಪವಿಭಾಗಾಧಿಕಾರಿ, ಕೊಪ್ಪಳ ಉಪ ವಿಭಾಗ, ಕೊಪ್ಪಳ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಜಿನುಗುಕೆರೆ ನಿರ್ಮಾಣಕ್ಕಾಗಿ, ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಕುಷ್ಟಗಿ, ಇವರ ಕೋರಿಕೆಯಂತೆ ತಾವರಗೇರಾ ಗ್ರಾಮದ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಸರ್ವೆ ನಂ:44/3 ವಿಸ್ತೀರ್ಣ 4–05 ಎಕರೆ ಜಮೀನಿನಲ್ಲಿನ ವಸ್ತು ಸ್ಥಿತಿಯನ್ನು ಪರಿಶೀಲಿಸದೆ, ಜಮೀನಿನಲ್ಲಿರುವ 49 ತೆಂಗಿನ ಮರಗಳ ಬದಲಾಗಿ 60 ತೆಂಗಿನ ಮರಗಳೆಂದು ಹಾಗೂ 117 ದಾಳಿಂಬೆ ಗಿಡಗಳ ಬದಲಾಗಿ 1434 ದಾಳಿಂಬೆ ಮರಗಳೆಂದು ಉದ್ದೇಶಪೂರ್ವಕವಾಗಿ ತಪ್ಪು ಲೆಕ್ಕಾಚಾರ ಹಾಕಿ, ಸರ್ಕಾರಕ್ಕೆ ರೂ.2,58,68,229/– ಆರ್ಥಿಕ ನಷ್ಟ ಉಂಟಾಗುವ ಐತೀರ್ಪು ರಚಿಸಿ, ಕರ್ತವ್ಯಲೋಪವೆಸಗಿರುವ ಆರೋಪ. | ಶ್ರೀ ಮಂಜುನಾಥ್ ರವರು ಮಾನ್ಯ ಕೆ.ಎ.ಟಿ ಅರ್ಜಿ ಸಂಖ್ಯೆ:10661/2022 ರನ್ವಯ ಮತ್ತು ಶ್ರೀ ಶೀರಹಟ್ಟಿ ರವರು ರಿಟ್ ಅರ್ಜಿ ಸಂಖ್ಯೆ:12735/2022 ರ ತೀರ್ಪಿನನ್ವಯ ಪರಿಶೀಲಿಸಿ ಕಂದಾಯ ಇಲಾಖೆಯ ಅಭಿಪ್ರಾಯ ಕೋರಲಾಗಿದೆ. |
| 41. | ಕೆ.ರಂಗನಾಥ, | ಉಪ ವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ವಿಭಾಗ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ | ಕೆ.ಎ.ಟಿಯು ದೋಷಾರೋಪಣೆ |

| ಕ್ರ ಸಂ. | ಅಧಿಕಾರಿಯ ಹೆಸರು ಶ್ರೀ / ಶ್ರೀಮತಿ | ಆರೋಪ | ತೆಗೆದುಕೊಂಡಿರುವ ಕ್ರಮ, ವಿಧಿಸಿದ ಶಿಕ್ಷೆ |
|---|---|---|---|
| | | ಬೆಂಗಳೂರು ನಗರ, ಪೂರ್ವ ತಾಲ್ಲೂಕು, ಕಣ್ಣೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ ಬಿ.ಕೆ. ನಾಗರಾಜ್, ಇವರ ರಾಜೀನಾಮೆ ಪತ್ರವನ್ನು ನಿಯಮಾನುಸಾರ ಪರಿಶೀಲಿಸದೇ ಅಂಗೀಕರಿಸಿರುವ ಆರೋಪ | ಪಟ್ಟಿಯನ್ನು ಬದಿಗಿರಿಸಿ ಆದೇಶಿಸಿದ್ದು, ಸದರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವ ಬಗ್ಗೆ ಸರ್ಕಾರಿ ವಕೀಲರ ಅಭಿಪ್ರಾಯ ಕೋರಲಾಗಿದೆ. |
| 42. | ಶ್ರೀ ಪಿ.ಜಯಮಾಧವ, ಹಾಗೂ ಇತರರು | ಅಧಿಕಾರಿಯು ಈ ಹಿಂದೆ ಮುಳಬಾಗಿಲು ತಾಲ್ಲೂಕಿನ ತಹಶೀಲ್ದಾರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಎಸಗಿರುವ ಹಣಕಾಸಿನ ದುರುಪಯೋಗದ ಬಗ್ಗೆ. | ಆಪಾಧಿತರ ಲಿಖಿತ ಹೇಳಿಕೆಯ ಬಗ್ಗೆ ಅಭಿಪ್ರಾಯ ಸ್ವೀಕೃತವಾಗಿದೆ. ಈ ಮಧ್ಯೆ ಆಪಾದಿತರಾದ ಶ್ರೀ ಜಯಮಾಧವ, ಮತ್ತು ಶ್ರೀಮತಿ ವಾಣಿಣಿ ಇವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ ರಿಟ್ ಅರ್ಜಿಗಳು ವಿಚಾರಣೆಯಲ್ಲಿರುತ್ತದೆ ಹಾಗೂ ತಡೆಯಾಜ್ಞೆ ಇರುತ್ತದೆ. |
| 43. | ಸಿ.ಎಲ್.ಆನಂದ್, ಕೆ.ಎ.ಎಸ್(ಕಿ.ಶ್ರೇ) | ರಾಷ್ಟ್ರೀಯ ಹೆದ್ದಾರಿ–209ರ ಭೂಸ್ವಾಧೀನವಾದ Arbitration ಪ್ರಕರಣಗಳಲ್ಲಿ ಹೆಚ್ಚಿನ ಭೂಪರಿಹಾರ ವಿತರಿಸಿರುವ ಆರೋಪ | 2ನೇ ಕಾರಣ ಕೇಳುವ ನೋಟೀಸಿಗೆ ಸಲ್ಲಿಸಿರುವ ಹೇಳಿಕೆಯ ಬಗ್ಗೆ ಜಿಲ್ಲಾಧಿಕಾರಿ, ಚಾಮರಾಜನಗರ ಇವರು ಸಲ್ಲಿಸಿರುವ ಅಭಿಪ್ರಾಯದ ಬಗ್ಗೆ ಲೋಕೋಪಯೋಗಿ ಅಭಿಪ್ರಾಯ ಪರಿಶೀಲನೆಯಲ್ಲಿದೆ. |
| 44. | ಸಿ.ನಾಗರಾಜು, ಕೆ.ಎ.ಎಸ್(ಹಿ.ಶ್ರೇ) | ಕರ್ನಾಟಕ ಗೃಹ ಮಂಡಳಿಯಲ್ಲಿ ವಿಶೇ ಭೂಸ್ವಾಧೀನಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುವಾಗ ಭೂಪರಿಹಾರ ಧನವನ್ನು ಜಮೀನಿನ ಮಾಲೀಕರಿಗೆ ಪಾವತಿಸದೇ, ಮಾನ್ಯ ನ್ಯಾಯಾಲಯದಲ್ಲಿ ಠೇವಣಿ ಇರಿಸದೇ ಕರ್ತವ್ಯಲೋಪ ಎಸಗಿರುವ ಬಗ್ಗೆ | ವಿಚಾರಣಾ ವರದಿ ನಿರೀಕ್ಷಿಸಿದೆ. |
| 45. | ಕುಸುಮಾ ಕುಮಾರಿ ಕೆ.ಎ.ಎಸ್(ಹಿ.ಶ್ರೇ) | ವಿಶೇಷ ಭೂಸ್ವಾಧೀನಾಧಿಕಾರಿ, ಕಬಿನಿ ಜಲಾಶಯ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುವಾಗ ಭೂಪರಿಹಾರ ವಿತರಣೆಯಲ್ಲಿ ಅವ್ಯವಹಾರ | ವಿಚಾರಣಾ ವರದಿ ನಿರೀಕ್ಷಿಸಿದೆ. |
| 46. | ಕೆ. ರಂಗನಾಥ್ ಕೆ.ಎ.ಎಸ್(ಹಿ.ಶ್ರೇ) | ನಿಯಮಬಾಹಿರವಾಗಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ವಿತರಿಸಿರುವ ಆರೋಪ | ವಿಚಾರಣಾ ವರದಿ ನಿರೀಕ್ಷಿಸಿದೆ. |
| 47. | ಶಂಕರ ವಣಿಕ್ಯಾಳ, ಕೆ.ಎ.ಎಸ್(ಹಿ.ಶ್ರೇ) ಮತ್ತು ಇತರರು | ಇನಾಂರದ್ದಿಯಾತಿ ನಿಯಮ 1979ರ ನಿಯಮ 5 ನ್ನು ಉಲ್ಲಂಘಿಸಿರುವ ಬಗ್ಗೆ | ಲಿಖಿತ ಹೇಳಿಕೆಯ ಬಗ್ಗೆ ಕಂದಾಯ ಇಲಾಖೆಯ ಅಭಿಪ್ರಾಯ ಕೋರಲಾಗಿದೆ. |
| 48. | ಶಂಕರ ವಣಿಕ್ಯಾಳ, ಕೆ.ಎ.ಎಸ್(ಹಿ.ಶ್ರೇ) | ಅಪರ ಜಿಲ್ಲಾಧಿಕಾರಿ, ಕಲಬುರಗಿ ಹುದ್ದೆಯಲ್ಲಿ ಕರ್ತವ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಕೃಷಿ ಜಮೀನನ್ನು ಕೃಷಿಯೇತರ ಜಮೀನಾಗಿ ಪರಿವರ್ತಿಸಿರುವ ಆರೋಪ | ಲಿಖಿತ ಹೇಳಿಕೆಯ ಬಗ್ಗೆ ಕಂದಾಯ ಇಲಾಖೆಯ ಅಭಿಪ್ರಾಯ ಕೋರಲಾಗಿದೆ. |
| 49. | ಎಂ.ಎಸ್.ಎನ್.ಬಾಬು, ಕೆ.ಎ.ಎಸ್(ಹಿ.ಶ್ರೇ) | ಉ.ಕಾ. ಬಿಡಿಎ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ನಿಯಮಬಾಹಿರವಾಗಿ ನಿವೇಶನ ಹಂಚಿಕೆ ಮಾಡಿರುವ ಆರೋಪ | ವಿಚಾರಣಾಧಿಕಾರಿಯನ್ನು ನೇಮಿಸಲಾಗಿದೆ. |

| ಕ್ರ ಸಂ. | ಅಧಿಕಾರಿಯ ಹೆಸರು ಶ್ರೀ / ಶ್ರೀಮತಿ | ಆರೋಪ | ತೆಗೆದುಕೊಂಡಿರುವ ಕ್ರಮ/ ವಿಧಿಸಿದ ಶಿಕ್ಷೆ |
|---|---|---|---|
| 50. | ಅಮರೇಶ್ ಹೆಚ್ | ವಿಶೇಷ ಭೂಸ್ವಾಧೀನಾಧಿಕಾರಿ, ಕೆ.ಐ.ಎ.ಡಿ.ಬಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲಿ 2 ಬಾರಿ ಪರಿಹಾರ ನೀಡಿರುವ ಆರೋಪ | ಆಡಳಿತ ಇಲಾಖೆಯ ಸ್ಪಷ್ಟೀಕರಣ ಕೋರಲಾಗಿದೆ. |
| 51. | ಶ್ರೀ.ಜಿ.ಮಲ್ಲಿಕಾರ್ಜುನ ಹಾಗೂ ಇತರರ ವಿರುದ್ಧ | ಸರ್ಕಾರದ ಜಮೀನು ಖಾಸಗಿಯವರ ಪಾಲಾಗಲು ಕಾರಣರಾಗಿರುವ ಆರೋಪ. | ಲಿಖಿತ ಹೇಳಿಕೆ ನಿರೀಕ್ಷಿಸಿದೆ |
| 52. | ಎಲಿಷಾ ಆಂಡ್ರೂಸ್, ಕೆ.ಎ.ಎಸ್. (ಹಿ.ಶ್ರೇ) | ಉಪ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆಯಲ್ಲಿ ಎಸಗಿರುವ ಆರೋಪಗಳ ಸಂಬಂಧ | ವಿಚಾರಣಾಧಿಕಾರಿಯನ್ನು ನೇಮಿಸಲಾಗಿದ್ದು, ವಿಚಾರಣಾ ವರದಿ ನಿರೀಕ್ಷಿಸಲಾಗಿದೆ. |
| 53. | ಶ್ರೀ ಕೆ.ಎಂ. ಸುರೇಶ್ ಕುಮಾರ್, ಕೆ.ಎ.ಎಸ್ (ಆಯ್ಕೆ ಶ್ರೇಣಿ) | ಗಂಗಾ ಕಲ್ಯಾಣ ಯೋಜನೆ, ನೇರ ಸಾಲ, ಉದ್ಯಮಶೀಲತೆ ಅಭಿವೃದ್ಧಿ ಯೋಜನೆ, ಮೈಕ್ರೋ ಕ್ರೆಡಿಟ್, ಸಮೃದ್ಧಿ ಮತ್ತು ಐರಾವತ ಯೋಜನೆಗಳಲ್ಲಿ ಭ್ರಷ್ಟಾಚಾರ, ಅಧಿಕಾರ ದುರುಪಯೋಗ, ಅನುದಾನ ದುರ್ಬಳಕೆ ಮಾಡಿಕೊಂಡಿರುವ ಆರೋಪ. | ದೋಷಾರೋಪಣಾ ಪಟ್ಟಿಯನ್ನು ಜಾರಿಗೊಳಿಸಲಾಗಿದ್ದು, ಕೆ.ಎ.ಟಿ. ಯಲ್ಲಿ ತಡೆಯಾಜ್ಞೆ ಪಡೆದಿರುತ್ತಾರೆ. |
| 54. | ರವಿಕುಮಾರ್, ಕೆ.ಎ.ಎಸ್(ಹಿ.ಶ್ರೇ) | ಐ.ಎಂ.ಎ ಪ್ರಸ್ತಾವನೆ | ಲಿಖಿತ ಹೇಳಿಕೆ ಬಗ್ಗೆ ಕಂದಾಯ ಇಲಾಖೆಯ ಅಭಿಪ್ರಾಯ ನಿರೀಕ್ಷಿಸಿದೆ |
| 55. | ವೀಣಾ.ಆರ್, ಕೆ.ಎ.ಎಸ್ (ಹಿ.ಶ್ರೇ) | ಐ.ಎಂ.ಎ ಪ್ರಸ್ತಾವನೆ | ಲಿಖಿತ ಹೇಳಿಕ ಬಗ್ಗೆ ಕಂದಾಯ ಇಲಾಖೆಯ ಅಭಿಪ್ರಾಯ ನಿರೀಕ್ಷಿಸಿದೆ |
| 56. | ಸುಮ.ಆರ್, ಕೆ.ಎ.ಎಸ್. (ಹಿ.ಶ್ರೇ) | ಮಾಹಿತಿ ಆಯೋಗದ ನಿರ್ದೇಶನದನ್ವಯ | ಲಿಖಿತ ಹೇಳಿಕೆ ಪರಿಶೀಲನೆಯಲ್ಲಿದೆ. |
| 57. | ಬಿ.ಬಸಂತಿ, ಕೆ.ಎ.ಎಸ್. (ಹಿ.ಶ್ರೇ) | ಮಾಹಿತಿ ಆಯೋಗದ ನಿರ್ದೇಶನದನ್ವಯ | ಲಿಖಿತ ಹೇಳಿಕೆ ಪರಿಶೀಲನೆಯಲ್ಲಿದೆ. |
| 58. | ವೈ. ಎಂ. ರಾಮಚಂದ್ರ ಮೂರ್ತಿ, | ಉಪ ವಿಭಾಗಾಧಿಕಾರಿ, ಬೆಂಗಳೂರು ದಕ್ಷಿಣ ಉಪ ವಿಭಾಗ, ಬೆಂಗಳೂರು, ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ ಕರ್ನಾಟಕ ಭೂ ಸುಧಾರಣಾ ಕಾಯ್ದೆಯ ಕಲಂ 79(ಎ) ಮತ್ತು 79(ಬಿ) ಉಲ್ಲಂಘನೆಗೆ ಸಂಬಂಧಿಸಿದಂತೆ ನಿಯಮಾನುಸಾರ ವಿಚಾರಣೆ ನಡೆಸದೇ ಸದರಿ ಕಲಂ ಗೆ ವ್ಯತಿರಿಕ್ತವಾಗಿ 8 ಎಲ್.ಆರ್.ಎಫ್ ಪ್ರಕರಣಗಳು, 3 ರೆವಿನ್ಯೂ ಅಪೀಲ್ ಪ್ರಕರಣಗಳು ಹಾಗೂ ಒಂದು ಆರ್.ಆರ್.ಟಿ ಪ್ರಕರಣದಲ್ಲಿ ಜಮೀನು ಹೊಂದಿರುವವರಿಗೆ ಸಹಾಯ ಮಾಡಿರುವುದು ಕಂದಾಯ ಇಲಾಖೆಯ ಆಡಿಟ್ ವರದಿಯಿಂದ ದೃಢಪಟ್ಟಿರುವ ಆರೋಪ. | ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಯನ್ನು ನೇಮಿಸಲಾಗಿದೆ.<br><br>ಆಪಾದಿತರು ಇದನ್ನು ಮಾನ್ಯ ಕೆ.ಎ.ಟಿ ಯಲ್ಲಿ ಪ್ರಶ್ನಿಸಿದ್ದು, ಮಾನ್ಯ ಕೆ.ಎ.ಟಿಯು ತಡೆಯಾಜ್ಞೆ ನೀಡಿರುತ್ತದೆ. ಪ್ರಸ್ತುತ ಮಾನ್ಯ ಕೆ.ಎ.ಟಿ ಯ ಅಂತಿಮ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲಾಗಿದೆ. |
| 59. | ಹೆಚ್. ರಾಮಂಜನೇಯ, | ಉಪ ವಿಭಾಗಾಧಿಕಾರಿ, ದೊಡ್ಡಬಳ್ಳಾಪುರ ಉಪ ವಿಭಾಗ, ದೊಡ್ಡಬಳ್ಳಾಪುರ, ಈ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ದೊಡ್ಡಸಣ್ಣೆ ಗ್ರಾಮದ ಸರ್ವೆ ನಂ.28 ರಲ್ಲಿ 24-00 ಎಕರೆ ವಿಸ್ತೀರ್ಣದ ಜಮೀನಿನನ್ನು ದಿನಾಂಕ:11-09-1991ರ ಆದೇಶದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿದ್ದಾಗ್ಯೂ ಮತ್ತೆ ಇದೇ ಜಮೀನಿನ ಮೇಲೆ ಹೊಸದಾಗಿ ಪ್ರಕರಣವನ್ನು ದಾಖಲಿಸಿಕೊಂಡು, ಪ್ರಕರಣದ ವಿಚಾರಣೆಯನ್ನು ಕೈಬಿಟ್ಟು ದಿನಾಂಕ:07-06-2002 ರಂದು ಆದೇಶಿಸಿರುವ ಆರೋಪ. | ವಿಚಾರಣೆಯ ಪ್ರಸ್ತುತ ಹಂತ ಹಾಗೂ ವರದಿ ಸಲ್ಲಿಸುವಂತೆ ವಿಚಾರಣಾಧಿಕಾರಿಯನ್ನು ಕೋರಲಾಗಿದೆ. |
| 60. | ಜೆ.ಸಿ. ಅನಿಲ್ ಕುಮಾರ್, | ವಿಶೇಷ ಜಿಲ್ಲಾಧಿಕಾರಿ, ಬೆಂಗಳೂರು ಹುದ್ದೆಯಲ್ಲಿ ಕರ್ತವ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಸರ್ಕಾರದ ಅಧಿಸೂಚನೆ | ವಿಚಾರಣಾ ವರದಿ ಸ್ವೀಕೃತವಾಗಿದ್ದು, |

| ಕ್ರ ಸಂ. | ಅಧಿಕಾರಿಯ ಹೆಸರು ಶ್ರೀ / ಶ್ರೀಮತಿ | ಆರೋಪ | ತೆಗೆದುಕೊಂಡಿರುವ ಕ್ರಮ, ವಿಧಿಸಿದ ಶಿಕ್ಷೆ |
|---|---|---|---|
| | | ಸಂಖ್ಯೆ: ಆರ್‌ಡಿ 400 ಎಎಸ್‌ಡಿ 2011, ದಿನಾಂಕ:10-10-2011ರ ಆದೇಶದಂತೆ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 136(3) ರಡಿ ಪ್ರಕರಣಗಳ ವಿಚಾರಣೆಯನ್ನು ಜಿಲ್ಲಾಧಿಕಾರಿಗಳು ಕೈಗೊಳ್ಳಲು ಅಧಿಕಾರ ಪ್ರತ್ಯಾಯೋಜಿಸಿಲಾಗಿದ್ದರೂ ಸಹಾ ಸದರಿ ಆದೇಶವನ್ನು ಪಾಲಿಸದೇ ದಿನಾಂಕ:10-10-2011 ರ ನಂತರ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 136(3) ರಡಿ ಪ್ರಕರಣಗಳ ವಿಚಾರಣೆಯನ್ನು ಕೈಗೊಂಡು ಆದೇಶ ಹೊರಡಿಸಿರುವ ಆರೋಪ. | ಪರಿಶೀಲನೆಯಲ್ಲಿದೆ. |
| 61. | 1. ಶ್ರೀ ಮಹಮ್ಮದ್ ವಲೀಮುಲ್ಲಾ, 2. ಶ್ರೀ ಎಸ್. ಎನ್. ಗಂಗಾಧರಯ್ಯ, 3. ಶ್ರೀ ಜಿ.ವಿ. ಸೀನಪ್ಪ, 4. ಶ್ರೀ ಇ. ರಾಧಾಕೃಷ್ಣ, 5.ಶ್ರೀ ನಾಗಾ ನಾಯಕ್, 6. ಶ್ರೀ ಜಿ.ಸಿ. ಅನಿಲ್ ಕುಮಾರ್, | ವಿಶೇಷ ಜಿಲ್ಲಾಧಿಕಾರಿ, ಬೆಂಗಳೂರು ಹುದ್ದೆಯಲ್ಲಿ ಕರ್ತವ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 400 ಎಎಸ್‌ಡಿ 2011, ದಿನಾಂಕ:10-10-2011ರ ಆದೇಶದಂತೆ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 136(3) ರಡಿ ಪ್ರಕರಣಗಳ ವಿಚಾರಣೆಯನ್ನು ಜಿಲ್ಲಾಧಿಕಾರಿಗಳು ಕೈಗೊಳ್ಳಲು ಅಧಿಕಾರ ಪ್ರತ್ಯಾಯೋಜಿಸಿಲಾಗಿದ್ದರೂ ಸಹಾ ಸದರಿ ಆದೇಶವನ್ನು ಪಾಲಿಸದೇ ದಿನಾಂಕ:10-10-2011 ರ ನಂತರ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 136(3) ರಡಿ ಪ್ರಕರಣಗಳ ವಿಚಾರಣೆಯನ್ನು ಕೈಗೊಂಡು ಆದೇಶ ಹೊರಡಿಸಿರುವ ಆರೋಪ. | ವಿಚಾರಣಾ ವರದಿ ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿದೆ. |
| 62. | ವಿ. ಶಶಿಕಲಾ & ಇತರರು | ಈ ಹಿಂದೆ ವಿಶೇಷ ಭೂಸ್ವಾಧೀನಾಧಿಕಾರಿ, ಮುನಿರಾಬಾದ್-ಮಹೆಬೂಬನಗರ ರೇಲ್ವೇ ಲೈನ್ ನಿರ್ಮಾಣ ಯೋಜನೆ, ಸಿಂಧನೂರು ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಕೃಷಿ ಜಮೀನುಗಳನ್ನು ಮುನಿರಾಬಾದ್-ಮಹೆಬೂಬ ನಗರ ರೇಲ್ವೆ ಮಾರ್ಗ ನಿರ್ಮಾಣಕ್ಕಾಗಿ ಭೂಸ್ವಾಧೀನ ಪಡಿಸಿಕೊಂಡ ಭೂಮಿಯ ಬೆಲೆಯನ್ನು ಉದ್ದೇಶಪೂರ್ವಕವಾಗಿ ಹೆಚ್ಚಿಸಿ, ತಪ್ಪು ಲೆಕ್ಕಾಚಾರ ಮಾಡಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವ ಆರೋಪ. | ಕಂದಾಯ ಇಲಾಖೆಯ ಸ್ಪಷ್ಟೀಕರಣ ಕೋರಲಾಗಿದೆ. |
| 63. | ಜೆ.ಸಿ. ರಾಜಶೇಖರ್, | ಕಾರ್ಯದರ್ಶಿ, ಬಿ.ಡಿ.ಎ, ಬೆಂಗಳೂರು ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ನಿಯಮಗಳನ್ನು ಉಲ್ಲಂಘಿಸಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹಳೇ ಬಡಾವಣೆಗಳಲ್ಲಿನ ನಿವೇಶನಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವ ಹಾಗೂ ನಿಯಮಗಳಿಗೆ ವಿರುದ್ಧವಾಗಿ ಸಾರ್ವಜನಿಕರಿಗೆ ನಿವೇಶನಗಳನ್ನು ಹಂಚಿಕೆ ಮಾಡಿರುವ ಆರೋಪ | ವಿಚಾರಣಾ ವರದಿಯನ್ನು ಒಪ್ಪದೇ, 2ನೇ ಕಾರಣ ಕೇಳುವ ನೋಟೀಸ್‌ಗೆ ಸಲ್ಲಿಸಿರುವ ಹೇಳಿಕೆಯ ಬಗ್ಗೆ ನಗರಾಭಿವೃದ್ಧಿ ಇಲಾಖೆಯ ಅಭಿಪ್ರಾಯ ಕೋರಲಾಗಿದೆ. |
| 64. | ಸಿ. ನಾಗಯ್ಯ, | ಸದರಿಯವರು ಆಯುಕ್ತರು, ಗುಲಬರ್ಗಾ ಮಹಾನಗರ ಪಾಲಿಕೆ, ಇಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಸರ್ಕಾರಿ ಆದೇಶ ದಿನಾಂಕ: 2-6-2003 ಹಾಗೂ ಕರ್ನಾಟಕ ಪೌರ ಅಧಿನಿಯಮಗಳ 1976ನ್ನು ಉಲ್ಲಂಘಿಸಿ ಸರ್ಕಾರದ ಪೂರ್ವಾನುಮತಿ ಪಡೆಯದೇ ಬಡೆಪೂರ ಗ್ರಾಮದ ನಿವೇಶನಗಳನ್ನು ಕಾನೂನುಬಾಹಿರವಾಗಿ ಮಾರಾಟ ಮಾಡಿರುವ ಆರೋಪ. | 2ನೇ ಕಾರಣ ಕೇಳುವ ನೋಟಿಸಿಗೆ ಸಲ್ಲಿಸಿರುವ ಹೇಳಿಕೆಯ ಬಗ್ಗೆ ಆಡಳಿತ ಇಲಾಖೆಯ ಅಭಿಪ್ರಾಯ ಕೋರಲಾಗಿದೆ. |
| 65. | ಅತೀಕ್ ಅಹ್ಮದ್ | ಕಾರ್ಯನಿರ್ವಾಹಕ ಅಧಿಕಾರಿ, ಕರ್ನಾಟಕ ರಾಜ್ಯ ಹಜ್ ಸಮಿತಿ, ಬೆಂಗಳೂರು, ಇಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಬೆಂಗಳೂರು ನಗರದಲ್ಲಿ ಹಜ್ ಘರ್ ನಿರ್ಮಾಣ ಮಾಡಲು ಮಂಜೂರಾದ ರೂ. 2,29,35,600/- ಗಳನ್ನು ಬೆಂಗಳೂರಿನ ಅಮಾನತ್ ಕೋ-ಆಪರೇಟಿವ್ ಬ್ಯಾಂಕ್‌ನಲ್ಲಿ ಜಮಾ ಮಾಡಿ, ಕರ್ನಾಟಕ ರಾಜ್ಯ ಹಜ್ ಸಮಿತಿಯ | ಆರ್ಥಿಕ ನಷ್ಟದ ಬಗ್ಗೆ ಆಡಳಿತ ಇಲಾಖೆಯು ದಿ:29.7.2019ರಂದು ಮಾಹಿತಿ ನೀಡಿದ್ದು, ಪರಿಶೀಲಿಸಿ, ವಿಚಾರಣಾಧಿಕಾರಿಗಳಿಗೆ de- |

| ಕ್ರ ಸಂ. | ಅಧಿಕಾರಿಯ ಹೆಸರು ಶ್ರೀ / ಶ್ರೀಮತಿ | ಆರೋಪ | ತೆಗೆದುಕೊಂಡಿರುವ ಕ್ರಮ, ವಿಧಿಸಿದ ಶಿಕ್ಷೆ |
|---|---|---|---|
| | | ದಿನಾಂಕ:01-03-2012ರ ಠರಾವನ್ನು ಉಲ್ಲಂಘಿಸಿರುವ ಆರೋಪ. | nova ವಿಚಾರಣೆ ನಡೆಸುವಂತೆ ವಿಚಾರಣಾಧಿಕಾರಿಯವರನ್ನು ಕೋರಲಾಗಿತ್ತು. ವಿಚಾರಣಾಧಿಕಾರಿಗಳು ನಡೆಸಲು ನಿರಾಕರಿಸಿದ್ದು, - ವಿಚಾರಣಾ ವರದಿಯನ್ನು ಒಪ್ಪದೇ 2ನೇ ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿದ್ದು, ಸದರಿ ನೋಟೀಸಿಗೆ ಮಾನ್ಯ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುತ್ತಾರೆ. |
| 66. | ಅತೀಕ್ ಅಹ್ಮದ್, | ಅಲ್ಪಸಂಖ್ಯಾತರ ಆಯೋಗ, ಬೆಂಗಳೂರು, ಇಲ್ಲಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದಾಗ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರು, ವಕ್ಫ್ ಆಸ್ತಿ ದುರುಪಯೋಗದ ಬಗ್ಗೆ ತಯಾರಿಸಿದ ವಿಶೇಷ ವರದಿ ಕುರಿತು ಮುಸ್ಲಿಂ ಸಮುದಾಯದಲ್ಲಿ ಅರಿವು ಮೂಡಿಸಲು ಇಂಗ್ಲೀಷ್, ಕನ್ನಡ ಹಾಗೂ ಉರ್ದು ಭಾಷೆಯಲ್ಲಿ ಮನವಿಯನ್ನು ಕರ ಪತ್ರವನ್ನು ಮುದ್ರಿಸಲು, ಸರಬರಾಜು ಆದೇಶ ನೀಡುವಾಗ ಮತ್ತು ಸದರಿ ಬಿಲ್ಲಿನ ಮೊತ್ತವನ್ನು ಪಾವತಿಸುವಲ್ಲಿನ ಹಾಗೂ ಇತರ ಆರೋಪಗಳು | ಮಾನ್ಯ ಕೆಎಟಿ ಅರ್ಜಿ ಸಂಖ್ಯೆ:2419/2022 ರಲ್ಲಿ ಸರ್ಕಾರದ ದಂಡನಾದೇಶವನ್ನು ರದ್ದುಪಡಿಸಲಾಗಿದ್ದು, ಅಪೀಲು ಸಲ್ಲಿಸಲು ಪರಿಶೀಲಿಸಲಾಗಿದೆ. |
| 67. | ಎಸ್.ಪಿ ಕುಲಕರ್ಣಿ & ಇತರರು | ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು - ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿದ ಅವದಿಯಲ್ಲಿ 2015-16 ಮತ್ತು 2016-17ನೇ ಸಾಲಿನ 5 ತರಬೇತಿ ಯೋಜನೆಗಳಾದ SDP, SCP, TSP, WDC & MINORITY ಇವುಗಳನ್ನು ಅನುಷ್ಠಾನಗೊಳಿಸುವಲ್ಲಿ ಡಿಸೆಂಬರ್ 2015 ರಿಂದ ಜನವರಿ 2016 ರವರೆಗೆ ಖಾಯಂ ಮತ್ತು ತಾತ್ಕಾಲಿಕ ವಿಟಿಪಿ ಸಂಸ್ಥೆಗಳಿಗೆ ತರಬೇತಿ ಪ್ರಾರಂಭಿಸಲು ಹಂಚಿಕೆ ಮಾಡಲಾದ ಕಾರ್ಯಾದೇಶವನ್ನು ಸರಿಯಾಗಿ ಪಾಲಿಸದ ಹಾಗೂ ಇತರೆ ಆರೋಪ. | ವಿಚಾರಣಾ ವರದಿ ನಿರೀಕ್ಷಿಸಲಾಗಿದೆ. |
| 68. | ನಾಗಾ ನಾಯಕ್ | ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು, ಈ ಹುದ್ದೆಯಲ್ಲಿ ಕರ್ತವ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ವಸತಿ ಶಾಲೆಗಳಿಗೆ ಕರ್ನಾಟಕ ತೆಂಗಿನ ನಾರಿನ ಅಭಿವೃದ್ಧಿ ನಿಗಮದಿಂದ ಹಾಸಿಗೆ ಮತ್ತು ದಿಂಬುಗಳನ್ನು ಖರೀದಿಸಿ ಸರಬರಾಜು ಮಾಡಿರುವ ಸಂಬಂಧದಲ್ಲಿ ಮೂಲ ಕಡತವನ್ನು ಅನಧಿಕೃತವಾಗಿ ತಿದ್ದುಪಡಿ ಮಾಡಿ, ಕಂಡಿಕೆಗಳನ್ನು ಹಾಗೂ ವ್ಯವಹಾರ ಪತ್ರಗಳನ್ನು ಬದಲಾಯಿಸಿರುವ ಹಾಗೂ ಇತರೆ ಆರೋಪಗಳು. | ವಿಚಾರಣಾ ವರದಿ ನಿರೀಕ್ಷಿಸಲಾಗಿದೆ. |
| 69. | ಎಸ್.ಪಿ.ಕುಲಕರ್ಣಿ | ಅಧಿಕಾರಿಯು ಈ ಹಿಂದೆ ನಿರ್ದೇಶಕರು ಕೌಶಲ್ಯಾಭಿವೃದ್ಧಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಅಧಿಕಾರ ವ್ಯಾಪ್ತಿ ಮೀರಿ ಕರ್ತವ್ಯಲೋಪ ಎಸಗಿರುವ ಬಗ್ಗೆ | ವಿಚಾರಣಾ ವರದಿ ನಿರೀಕ್ಷಿಸಿದೆ |

| ಕ್ರ. ಸಂ. | ಅಧಿಕಾರಿಯ ಹೆಸರು ಶ್ರೀ / ಶ್ರೀಮತಿ | ಆರೋಪ | ತೆಗೆದುಕೊಂಡಿರುವ ಕ್ರಮ, ವಿಧಿಸಿದ ಶಿಕ್ಷೆ |
|---|---|---|---|
| 70. | ಆರ್.ಲೀಲಾವತಿ ಸರ್ಕಾರದ ವಿಶೇಷ ಕಾರ್ಯದರ್ಶಿ(ನಿವೃತ್ತ) | ಸದರಿ ಅಧಿಕಾರಿಯು ಈ ಹಿಂದೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿನ ಆರೋಪಗಳ ಬಗ್ಗೆ. | ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1957ರ ನಿಯಮ 11 ರನ್ವಯ ಜಾರಿಗೊಳಿಸಲಾದ ಕಾರಣ ಕೇಳುವ ನೋಟಿಸ್ ಹಾಗೂ ದೋಷಾರೋಪಣೆಗೆ ಲಿಖಿತ ಹೇಳಿಕೆ ಸಲ್ಲಿಸಲು ಅಧಿಕಾರಿಯು ಕೆಲವೊಂದು ಮಾಹಿತಿ/ದಾಖಲೆಗಳನ್ನು ಕೋರಿದ್ದು, ಸದರಿ ದಾಖಲೆಗಳನ್ನು ಒದಗಿಸುವಂತೆ ಆಡಳಿತ ಇಲಾಖೆಯಾದ ಸಮಾಜ ಕಲ್ಯಾಣ ಇಲಾಖೆಯನ್ನು ಕೋರಲಾಗಿದ್ದು, ಮಾಹಿತಿ ನಿರೀಕ್ಷಿಸಿದೆ. |
| 71. | ಅನ್ವರ್‌ಭಾಷ, ಸರ್ಕಾರದ ಉಪ ಕಾರ್ಯದರ್ಶಿ | ಅಧಿಕಾರಿಯವರು ಈ ಹಿಂದೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಗಣಿ ಶಾಖೆಯಲ್ಲಿ ಅಧೀನ ಕಾರ್ಯದರ್ಶಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಕಡತಗಳಲ್ಲಿ ಕೈಗೊಳ್ಳಬೇಕಾದ ಕ್ರಮ ಬಾಕಿ ಇದ್ದರೂ ಸಹ ಮೇಲಾಧಿಕಾರಿಗಳ ಗಮನಕ್ಕೆ ತರದೇ ಕಡತವನ್ನು ಮುಕ್ತಾಯಗೊಳಿಸಿರುವ ಬಗ್ಗೆ. | ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1957ರ ನಿಯಮ 11 ರನ್ವಯ ಜಾರಿ ಗೊಳಿಸಲಾದ ಕಾರಣ ಕೇಳುವ ನೋಟಿಸ್ ಹಾಗೂ ದೋಷಾರೋಪಣೆಗೆ ಅಧಿಕಾರಿಯು ಸಲ್ಲಿಸಿರುವ ಲಿಖಿತ ಹೇಳಿಕೆಯ ಬಗ್ಗೆ ಆಡಳಿತ ಇಲಾಖೆಯಾದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿದ್ದು, ಮಾಹಿತಿ ನಿರೀಕ್ಷಿಸಿದೆ. |
| 72. | ಕೆ.ಸಿ.ಕುಮಾರ್ ಸರ್ಕಾರದ ಉಪ ಕಾರ್ಯದರ್ಶಿ(ನಿವೃತ್ತ),<br><br>ಶ್ರೀಎ.ಎಂ.ಶಿವಮೂರ್ತಿ ಪ್ರಸುತ ಹಿರಿಯ ಸಹಾಕರು<br><br>ಹಾಗೂ<br><br>ಶ್ರೀಮತಿ ಜ್ಯೋತಿಲಕ್ಷ್ಮಿ, ಪ್ರಸ್ತುತ ಸಹಾಯಕರು | ಇವರುಗಳು ಈ ಹಿಂದೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸೇವೆಗಳು-ಬಿ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಸದರಿ ಇಲಾಖೆಯ ಸೇವೆಗಳು-ಬಿ ಶಾಖೆಯಲ್ಲಿನ ಇಲಾಖಾ ವಿಚಾರಣೆಗೆ ಸಂಬಂಧಿಸಿದ 4 ಪ್ರಮುಖ ಭೌತಿಕ ಕಡತಗಳು ಕಣ್ಮರೆಯಾಗಲು ಹಾಗೂ ಶಾಖೆಯಲ್ಲಿ ಚಲನೆಯಲ್ಲಿದ್ದ 23 ಕಡತಗಳು ಚಲನವಲನ ವಹಿಯಲ್ಲಿ ವಿವಿಧ ರೀತಿ ನಮೂದಿಸಲ್ಪಟ್ಟಿದ್ದರೂ ಸಹ ಗಣಕಯಂತ್ರದಲ್ಲಿ ಮುಕ್ತಾಯಗೊಳಿಸಿರುವ ಹಾಗೂ ಇತ್ಯಾದಿ ಆರೋಪಗಳು. | ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 13ನ್ನು ಓದಿಕೊಂಡಂತೆ ನಿಯಮ 11ರಡಿ ಪ್ರಾರಂಭಿಸಲಾದ ಜಂಟಿ ಇಲಾಖಾ ವಿಚಾರಣೆಯಲ್ಲಿ ಆಪಾದಿತ ಅಧಿಕಾರಿ ಹಾಗೂ ನೌಕರರು ದೋಷಾರೋಪಣೆಗೆ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ಈ ಬಗ್ಗೆಆಡಳಿತ ಇಲಾಖೆಯಾದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಭಿಪ್ರಾಯ ಕೋರಲಾಗಿದ್ದು, ಮಾಹಿತಿ |

| ಕ್ರ ಸಂ. | ಅಧಿಕಾರಿಯ ಹೆಸರು ಶ್ರೀ / ಶ್ರೀಮತಿ | ಆರೋಪ | ತೆಗೆದುಕೊಂಡಿರುವ ಕ್ರಮ, ವಿಧಿಸಿದ ಶಿಕ್ಷೆ |
|---|---|---|---|
| | | | ನಿರೀಕ್ಷಿಸಿದೆ. |
| 73. | ಸದಾನಂದಪಾವಸ್ಕರ್ ಸರ್ಕಾರದ ಉಪ ಕಾರ್ಯದರ್ಶಿ (ನಿವೃತ್ತ) | ಅಧಿಕಾರಿಯು ಈ ಹಿಂದೆಯೋಜನೆ. ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಉಪ ನಿರ್ದೇಶಕರ ಹುದ್ದೆಯಿಂದ ಜಂಟಿ ನಿರ್ದೇಶಕರ ಹುದ್ದೆಗೆ ಮುಂಬಡ್ತಿ ನೀಡುವ ಸಮಯದಲ್ಲಿ ಖಾಲಿ ಇಲ್ಲದಿರುವ ಹುದ್ದೆಗಳಿಗೆ ಸ್ಥಳ ನಿಯುಕ್ತಿಗೊಳಿಸಿರುವ ಆರೋಪದ ಕುರಿತು. | ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1957ರ ನಿಯಮ 11 ರನ್ವಯ ಜಾರಿಗೊಳಿಸಲಾದ ಕಾರಣ ಕೇಳುವ ನೋಟಿಸ್ ಹಾಗೂ ದೋಷಾರೋಪಣೆಗೆ ಲಿಖಿತ ಹೇಳಿಕೆ ಸಲ್ಲಿಸಲು ಅಧಿಕಾರಿಯು ಕೆಲವೊಂದು ಮಾಹಿತಿ/ದಾಖಲೆಗಳನ್ನು ಕೋರಿದ್ದು,ಅವುಗಳನ್ನು ಆಡಳಿತ ಇಲಾಖೆಯಾದ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯಿಂದ ಪಡೆದು ಆಪಾದಿತ ಅಧಿಕಾರಿಯು ಒದಗಿಸಲಾಗಿರುತ್ತದೆ. ಆಪಾದಿತ ಅಧಿಕಾರಿಯಿಂದ ಲಿಖಿತ ಹೇಳಿಕೆ ನಿರೀಕ್ಷಿಸಿದೆ. |
| 74. | ಯು.ಹೆಚ್. ನಾರಾಯಣಸ್ವಾಮಿ ಸರ್ಕಾರದ ಉಪಕಾರ್ಯದರ್ಶಿ(ನಿವೃತ್ತ) | ಶ್ರೀ ಯು.ಹೆಚ್. ನಾರಾಯಣಸ್ವಾಮಿ, ನಿವೃತ್ತ ಉಪ ಕಾರ್ಯದರ್ಶಿ, ಇವರು ಈ ಹಿಂದೆ ಸರ್ಕಾರದ ಅಧೀನಕಾರ್ಯದರ್ಶಿ, ಸಿಆಸುಇ(ಸೇವೆಗಳು-೧) ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಶ್ರೀಕೆ.ರಾಮಣ್ಣನಾಯ್ಕ, ಭಾ.ಆ.ಸೇ (ನಿವೃತ್ತ) ಇವರ ವಿರುದ್ಧ ಇರುವ ಇಲಾಖಾ ವಿಚಾರಣೆ ಇನ್ನೂ ಪೂರ್ಣ ಗೊಂಡಿಲ್ಲದೇ ಇದ್ದರೂ ಸಹ ಮಹಾಲೇಖಪಾಲರಿಗೆ ಪತ್ರ ಬರೆದು ಯಾವುದೇ ಬಾಕಿ ಇರುವುದಿಲ್ಲವೆಂದು ತಿಳಿಸಿರುವ ಬಗ್ಗೆ. | ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1957ರ ನಿಯಮ 11 ರನ್ವಯ ಪ್ರಾರಂಭಿಸಲಾದ ಇಲಾಖಾ ವಿಚಾರಣೆಯಲ್ಲಿ ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯನ್ನು ದಿನಾಂಕ: 28-07-2020ರ ಆದೇಶದಲ್ಲಿ ನೇಮಿಸಲಾಗಿರುತ್ತದೆ. ಆದರೆ, ಆಪಾದಿತರು ಸದರಿ ವಿಚಾರಣೆಯನ್ನು ಮಾನ್ಯ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿಸಂಖ್ಯೆ : 2259-2021ರಲ್ಲಿ ಪ್ರಶ್ನಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ: 04-07-2023ರ ತೀರ್ಪಿನಲ್ಲಿ, ವಿಚಾರಣೆಯನ್ನು ಮುಂದುವರೆಸುವಂತೆ ನಿರ್ದೇಶಿಸಿ ಪ್ರಕರಣವನ್ನು ವಜಾಗೊಳಿಸಿರುತ್ತದೆ. ಆದ್ದರಿಂದ, ವಿಚಾರಣಾ ವರದಿ ನಿರೀಕ್ಷಿಸಲಾಗಿದೆ. |
| 75. | ಅನ್ವರ್‌ಭಾಷ, ಸರ್ಕಾರದ ಉಪ ಕಾರ್ಯದರ್ಶಿ | ಅಧಿಕಾರಿಯವರು ಈ ಹಿಂದೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಗಣಿ ಶಾಖೆಯಲ್ಲಿ ಅಧೀನ ಕಾರ್ಯದರ್ಶಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಕಡತಗಳಲ್ಲಿ ಕೈಗೊಳ್ಳಬೇಕಾದ ಕ್ರಮ ಬಾಕಿ ಇದ್ದರೂ ಸಹ | ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1957ರ ನಿಯಮ 12 ರನ್ವಯ ಜಾರಿಗೊಳಿಸಲಾದ ಕಾರಣ |

| ಕ್ರ ಸಂ. | ಅಧಿಕಾರಿಯ ಹೆಸರು ಶ್ರೀ / ಶ್ರೀಮತಿ | ಆರೋಪ | ತೆಗೆದುಕೊಂಡಿರುವ ಕ್ರಮ, ವಿಧಿಸಿದ ಶಿಕ್ಷೆ |
|---|---|---|---|
| | | ಮೇಲಾಧಿಕಾರಿಗಳ ಗಮನಕ್ಕೆ ತರದೇ ಕಡತವನ್ನು ಮುಕ್ತಾಯಗೊಳಿಸಿರುವ ಬಗ್ಗೆ. | ಕೇಳುವ ನೋಟಿಸ್ ಹಾಗೂ ದೋಷಾರೋಪಣೆಗೆ ಅಧಿಕಾರಿಯು ಸಲ್ಲಿಸಿರುವ ಲಿಖಿತ ಹೇಳಿಕೆಯ ಬಗ್ಗೆ ಆಡಳಿತ ಇಲಾಖೆಯಾದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿದ್ದು, ಮಾಹಿತಿ ನಿರೀಕ್ಷಿಸಿದೆ. |
| 76. | ಆರ್.ಜೆ.ಜ್ಯೋತಿ<br><br>ಸರ್ಕಾರದ ಉಪ ಕಾರ್ಯದರ್ಶಿ | ಅಧಿಕಾರಿಯವರು ಈ ಹಿಂದೆ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಅವರ ಸೇವೆಯನ್ನು ಸಿಆಸು ಇಲಾಖೆಗೆ ಹಿಂದಿರುಗಿಸಿದ ನಂತರವು ಸದರಿ ಇಲಾಖೆಯ ಪ್ರಮುಖ ಕಡತಗಳು/ದಾಖಲೆಗಳನ್ನು ಹಾಗೂ ಅಲ್ಮೇರಾಗಳ ಕೀಗಳನ್ನು ಹಿಂದಿರುಗಿಸದೇ ಇರುವ ಬಗ್ಗೆ. | ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1957ರ ನಿಯಮ 12 ರನ್ವಯ ಪ್ರಾರಂಭಿಸಲಾದ ಇಲಾಖಾ ವಿಚಾರಣೆಯಲ್ಲಿ ಆಪಾದಿತ ಅಧಿಕಾರಿಯು ಸಲ್ಲಿಸಿರುವ ಲಿಖಿತ ಹೇಳಿಕೆ ಹಾಗೂ ಈ ಬಗ್ಗೆ ಆಡಳಿತ ಇಲಾಖೆಯಾದ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಅಭಿಪ್ರಾಯವನ್ನು ಹಾಗೂ ಆರೋಪಗಳ ಗಂಭೀರತೆ ಬಗ್ಗೆ ಪರಿಶೀಲಿಸಿ, ಸದರಿ ಅಧಿಕಾರಿಯ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1957ರ ನಿಯಮ 11ರಡಿ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲು ತೀರ್ಮಾನಿಸಲಾಗಿದೆ ಹಾಗೂ ಅದರಂತೆ, ಸೂಕ್ತ ಪ್ರಸ್ತಾವನೆ, ದೋಷಾರೋಪಣೆಯನ್ನು ಕಳುಹಿಸುವಂತೆ ಆಡಳಿತ ಇಲಾಖೆಯಾದ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯನ್ನು ಕೋರಲಾಗಿದ್ದು, ಮಾಹಿತಿ ನಿರೀಕ್ಷಿಸಿದೆ. |
| 77. | ಕೆ. ರಮೇಶ್,<br>ನಿವೃತ್ತ ಸರ್ಕಾರದ ಅಧೀನ ಕಾರ್ಯದರ್ಶಿ | ಈ ಹಿಂದೆ ನಿಯೋಜನೆ ಮೇಲೆ ತಹಶೀಲ್ದಾರ್ ಮಧುಗಿರಿ ತಾಲ್ಲೂಕು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ 35 ವರ್ಷದಿಂದಲೂ ಅನುಭವದಲ್ಲಿದ್ದು ಸಾಗುವಳಿಯಂತೆ ತಮ್ಮ ಹೆಸರಿನಲ್ಲಿ ಮ್ಯುಟೇಶನ್ ಮಾಡಿ ಜಮೀನಿನ ಆಕಾರ ಬಂದ ದುರಸ್ತಿ ಮಾಡಿಕೊಡಲು ಯಾವುದೇ ಕ್ರಮವಹಿಸದೇ ಇರುವ ಬಗ್ಗೆ. | ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 29 ಸೇಇವಿ 2017, ದಿನಾಂಕ:02.03.2019 ರಲ್ಲಿ ಇಲಾಖಾ ವಿಚಾರಣೆಯನ್ನು ನಡೆಸಲು ಕ.ನಾ.ಸೇ (ವ.ನಿ. & ಮೇ) ನಿಯಮಗಳು, 1957ರ ನಿಯಮ 14-ಎ ರಡಿಯಲ್ಲಿ |

| ಕ್ರ ಸಂ. | ಅಧಿಕಾರಿಯ ಹೆಸರು ಶ್ರೀ / ಶ್ರೀಮತಿ | ಆರೋಪ | ತೆಗೆದುಕೊಂಡಿರುವ ಕ್ರಮ. ವಿಧಿಸಿದ ಶಿಕ್ಷೆ |
|---|---|---|---|
| | | | ಗೌ. ಉಪ ಲೋಕಾಯುಕ್ತರಿಗೆ ವಹಿಸಿ ಆದೇಶಿಸಲಾಗಿದೆ. |
| 78. | ಬಿ. ಕಮಲಮ್ಮ ನಿವೃತ್ತ ಅಧೀನ ಕಾರ್ಯದರ್ಶಿ ಮತ್ತು ಶ್ರೀ ಡಿ.ಪಿ. ಆನಂದಮಣಿ, ಶೀಘ್ರಲಿಪಿಗಾರರು | ಈ ಹಿಂದೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕಡತ ಸಂಖ್ಯೆ: ಯುಸೇಇ 28 ಯುರಾಸೇ 2007ರಲ್ಲಿ ಮೂಲ ಟಿಪ್ಪಣಿ ಹಾಳೆಯನ್ನು ಅಕ್ರಮವಾಗಿ ತೆಗೆದು ಬದಲಾಗಿ ಮಾನ್ಯ ರಾಜ್ಯಪಾಲರ ಸಲಹೆಗಾರರು ಮತ್ತು ಘನತೆವೆತ್ತ ರಾಜ್ಯ ಪಾಲರು ಅನುಮೋದನೆ ನೀಡಿರುವಂತೆ ಫೋರ್ಜರಿ ಸಹಿ ಇರುವ ಟಿಪ್ಪಣಿ ಹಾಳೆಯನ್ನು ಅಕ್ರಮವಾಗಿ ಇರಿಸುವ ಮೂಲಕ SCT Institute of Technology ಸಂಸ್ಥೆಗೆ ಜಕ್ಕೂರಿನ ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ವಿಮಾನ ಹಾರಾಟದ ಆಪರೇಷನ್ ಮತ್ತು ಮೇಂಟೆನೆನ್ಸ್ ಕಾರ್ಯನಿರ್ವಹಣೆ ಮಾಡಲು ಮಂಜೂರು ಮಾಡುವಲ್ಲಿ ಪ್ರಮುಖ ಪಾತ್ರವಹಿಸಿ ಕರ್ತವ್ಯಲೋಪ ಎಸಗಿರುವ ಆರೋಪದ ಕುರಿತು ಜಂಟಿ ಇಲಾಖಾ ವಿಚಾರಣೆ | ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 05 ಸೇಇವಿ 2021, ದಿನಾಂಕ:03.08.2023 ರಲ್ಲಿ ಇಲಾಖಾ ವಿಚಾರಣೆಯನ್ನು ನಡೆಸಲು ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಯನ್ನು ನೇಮಕ ಮಾಡಿ ಆದೇಶಿಸಲಾಗಿದೆ. |
| 79. | ರಮೇಶ್ ಕೆ ನಿವೃತ್ತ ಅಧೀನ ಕಾರ್ಯದರ್ಶಿ, | ಈ ಹಿಂದೆ ನಿಯೋಜನೆ ಮೇಲೆ ತಹಶೀಲ್ದಾರ್, ಕುಣಿಗಲ್ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶವಿದ್ದರೂ, ರಸ್ತೆ ಅಗಲೀಕರಣಕ್ಕಾಗಿ ಮನೆಗಳನ್ನು ತೆರವುಗೊಳಿಸಿರುವ ಕುರಿತು. | ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಯನ್ನು ನೇಮಕ ಮಾಡಿ ದಿನಾಂಕ:06.10.2022 ರಂದು ಆದೇಶ ಹೊರಡಿಸಲಾಗಿದೆ. |
| 80. | ಜಿ.ಹೆಚ್. ನಾಗರಾಜು ನಿವೃತ್ತ ಅಧೀನ ಕಾರ್ಯದರ್ಶಿ | ಈ ಹಿಂದೆ ನಿಯೋಜನೆ ಮೇಲೆ ತಹಶೀಲ್ದಾರರಾಗಿ ಹನೂರು ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಎಸಗಿದ್ದಾರೆನ್ನಲಾದ 04 ಆರೋಪಗಳ ಕುರಿತು | ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 11 ಸೇಇವಿ 2022, ದಿನಾಂಕ:16.11.2023 ರಂದು ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಯನ್ನು ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ. |
| 81. | ಜಿ.ಹೆಚ್. ನಾಗರಾಜು ನಿವೃತ್ತ ಅಧೀನ ಕಾರ್ಯದರ್ಶಿ | ಈ ಹಿಂದೆ ನಿಯೋಜನೆ ಮೇಲೆ ತಹಶೀಲ್ದಾರರಾಗಿ ಹನೂರು ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಕೌದಳ್ಳಿ ಗ್ರಾಮದ ಸ.ನಂ. 711/1ರಲ್ಲಿನ 2.50 ಎಕರೆ/ಸೆಂಟ್ಸ್ ವಿಸ್ತೀರ್ಣದ ಜಮೀನನ್ನು ಅಕ್ರಮವಾಗಿ ಖಾತೆ ಬದಲಾವಣೆ ಮಾಡಿರುತ್ತಾರೆಂಬ ಆರೋಪದ ಕುರಿತು | 02ನೇ ಕಾರಣ ಕೇಳುವ ನೋಟೀಸ್‌ಗೆ ಅಧಿಕಾರಿಯವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಪರಿಶೀಲಿಸಲಾಗುತ್ತಿದೆ. |
| 82. | ಟಿ. ಮಂಜುನಾಥ್, ಸರ್ಕಾರದ ಅಧೀನ ಕಾರ್ಯದರ್ಶಿ | ಈ ಹಿಂದೆ ಶಾಖಾಧಿಕಾರಿಯಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ತಮ್ಮ ಬಳಿಯಲ್ಲಿ ಬಾಕಿ ಇರಿಸಿಕೊಂಡಿದ್ದ ಕಡತಗಳಲ್ಲಿ ಪ್ರಮುಖವಾಗಿ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿ/ನೌಕರರ ವಿರುದ್ಧದ ಲೋಕಾಯುಕ್ತ /ಇಲಾಖಾ ವಿಚಾರಣೆ ಮತ್ತು ನ್ಯಾಯಾಲಯ ಪ್ರಕರಣಗಳಲ್ಲಿ ಆಪಾದಿತರ ಹಲವು ಮಹತ್ವದ ಕಡತಗಳನ್ನು ತಮ್ಮ ಬಳಿಯಲ್ಲಿಯೇ ಇರಿಸಿಕೊಂಡು ಕರ್ತವ್ಯ ಲೋಪ ಎಸಗಿರುತ್ತಾರೆಂಬ ಆರೋಪ | 02ನೇ ಕಾರಣ ಕೇಳುವ ನೋಟೀಸ್‌ಗೆ ಅಧಿಕಾರಿಯವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಪರಿಶೀಲಿಸಲಾಗುತ್ತಿದೆ. |
| 83. | ಮಂಜುನಾಥ ಎಂ. ಸರ್ಕಾರದ ಅಧೀನ ಕಾರ್ಯದರ್ಶಿ | ಈ ಹಿಂದೆ ಆರ್ಥಿಕ ಇಲಾಖೆಯ ಜಿಲ್ಲಾ ಪಂಚಾಯತ್ ಶಾಖೆಯಲ್ಲಿ ಸರ್ಕಾರದ ಅಧೀನ ಕಾರ್ಯದರ್ಶಿ ಹುದ್ದೆಯ ಕರ್ತವ್ಯದೊಂದಿಗೆ ಅಧೀನ ಕಾರ್ಯದರ್ಶಿ (ಸಾಂಸ್ಥಿಕ ಹಣಕಾಸು) ಹುದ್ದೆಯಲ್ಲಿ ಅಧಿಕ ಪ್ರಭಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ 2020-21ನೇ ಸಾಲಿನಲ್ಲಿ ನಬಾರ್ಡ್ ಸಂಸ್ಥೆಯು ಸರ್ಕಾರಕ್ಕೆ ಬಿಡುಗಡೆ ಮಾಡಿರುವ ರೂ. | ಕ.ನಾ.ಸೇ (ವ.ನಿ & ಮೇ) ನಿಯಮಾವಳಿಗಳು 1957ರ ನಿಯಮ 11ರಡಿ ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿದ್ದು, ಅಧಿಕಾರಿಯವರ ಲಿಖಿತ |

| ಕ್ರ ಸಂ. | ಅಧಿಕಾರಿಯ ಹೆಸರು ಶ್ರೀ / ಶ್ರೀಮತಿ | ಆರೋಪ | ತೆಗೆದುಕೊಂಡಿರುವ ಕ್ರಮ, ವಿಧಿಸಿದ ಶಿಕ್ಷೆ |
|---|---|---|---|
| | | 5.46 ಕೋಟಿಯನ್ನು ಖಜಾನೆಗೆ ಜಮೆ ಮಾಡದೇ ಇರುವುದರಿಂದ ವರ್ಷಾಂತ್ಯದ ಲೆಕ್ಕಚಾರವನ್ನು ಅಂತಿಮಗೊಳಿಸುವಲ್ಲಿ ತೊಡಕು ಉಂಟಾಗಿರುತ್ತದೆಂಬ ಆರೋಪ | ಹೇಳಿಕೆಯನ್ನು ಪರಿಶೀಲಿಸಲಾಗುತ್ತಿದೆ. |
| 84. | 1) ಬಿ.ಎನ್. ಪ್ರವೀಣ, ಸರ್ಕಾರದ ಅಧೀನ ಕಾರ್ಯದರ್ಶಿ, 2) ಶ್ರೀ ಬಾಲರಾಮಚಂದ್ರೇಗೌಡ, ಶಿರಸ್ತೇದಾರ್, ಶ್ರೀನಿವಾಸಪುರ ತಾಲ್ಲೂಕು ಮತ್ತು 3) ಟಿ. ಧನುಷ್, ಗ್ರಾಮಲೆಕ್ಕಿಗರು | ಈ ಹಿಂದೆ ಮುಳಬಾಗಿಲು ತಾಲ್ಲೂಕಿನ ತಹಶೀಲ್ದಾರರಾಗಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ದುಗ್ಗಸಂದ್ರ ಹೋಬಳಿ, ನಲ್ಲೂರು ಗ್ರಾಮದ ಸ.ನಂ. 137ರ ಜಮೀನಿನ ಮೂಲ ಮಂಜೂರಾತಿ ನೈಜತೆಯನ್ನು ಮತ್ತು ಸರ್ವೆ ದಾಖಲೆಗಳನ್ನು ಪರಿಶೀಲಿಸದೇ ಕಾನೂನು ಬಾಹಿರವಾಗಿ ವಾರಸುದಾರರ ಹೆಸರಿಗೆ ಖಾತೆ ಬದಲಾವಣೆ ಮಾಡಿರುತ್ತಾರೆಂಬ ಆರೋಪ | ಕ.ನಾ.ಸೇ (ವ.ನಿ & ಮೇ) ನಿಯಮಾವಳಿಗಳು 1957ರ ನಿಯಮ 11ರಡಿ ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿದ್ದು, ಅಧಿಕಾರಿ/ನೌಕರರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಆಡಳಿತ ಇಲಾಖೆಗೆ ಕಳುಹಿಸಿ ವರದಿಯನ್ನು ನೀಡುವಂತೆ ಕೋರಲಾಗಿರುತ್ತದೆ. |
| 85. | ಡಿ ಧನಂಜಯ ಸರ್ಕಾರದ ಅಧೀನ ಕಾರ್ಯದರ್ಶಿ | ಈ ಹಿಂದೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಕೋವಿಡ್-19ರ ಬಗ್ಗೆ ತುರ್ತಾಗಿ ಕ್ರಮವಹಿಸಬೇಕಾದ ಸ್ವೀಕೃತಿಗಳನ್ನು ಕ್ರಮವಹಿಸದೇ ಬಾಕಿ ಇರಿಸಿಕೊಂಡಿರುವ ಹಾಗೂ ಶೀಘ್ರವಾಗಿ ಆದೇಶ ಹೊರಡಿಸಲು ಸೂಚಿಸಿರುವ ಕಡತದಲ್ಲಿ ಯಾವುದೇ ಕ್ರಮ ವಹಿಸದೇ ಕರ್ತವ್ಯ ಲೋಪ ಎಸಗಿರುತ್ತಾರೆಂಬ ಆರೋಪ | ಕ.ನಾ.ಸೇ (ವ.ನಿ & ಮೇ) ನಿಯಮಾವಳಿಗಳು 1957ರ ನಿಯಮ 12ರಡಿ ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿದ್ದು, ಅಧಿಕಾರಿಯವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಆಡಳಿತ ಇಲಾಖೆಗೆ ಕಳುಹಿಸಿ ವರದಿಯನ್ನು ನೀಡುವಂತೆ ಕೋರಲಾಗಿರುತ್ತದೆ. |

********